KACM400014872018

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಯವರ ನ್ಯಾಯಾಲಯ., ಮೂಡಿಗೆರೆ.

**-: ಉಪಸ್ಥಿತರು :-**

ಶ್ರೀ ಯೋಗೇಶ ಎಂ.ಆರ್., ಬಿ.ಎ. ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.,
ಮೂಡಿಗೆರೆ.

ದಿನಾಂಕ **14** ನೇ ಆಗಸ್ಟ್ **2026**
ಕ್ರಿಮಿನಲ್ ಪ್ರಕರಣ ಸಂಖ್ಯೆ **1069/2018**

ಫಿರ್ಯಾದುದಾರರು : ರಾಜ್ಯದ ಪರ ಮೂಡಿಗೆರೆ ಠಾಣಾ ಆರಕ್ಷಕರು
*(ಸಹಾಯಕ ಸರ್ಕಾರಿ ಅಭಿಯೋಜಕರವರಿಂದ)*

**-ವಿರುದ್ಧ-**

ಆರೋಪಿ : ಅಬ್ಬಾಸ್ @ ಇದ್ರಿ ಅಬ್ಬಾಸ್,
ವಯಸ್ಸು ಸುಮಾರು 38 ವರ್ಷ,
ಬಿನ್ ದಿಃ ಮೈದಿನಬ್ಬ,
ವಾಸಃ ಮೊದಲನೇ ಕ್ರಾಸ್,
ಬಾಪುನಗರ, ಹೆಸ್ಗಲ್ ಅಂಚೆ,
ಮೂಡಿಗೆರೆ ತಾಲ್ಲೂಕು.

*(ಆರೋಪಿ ಪರವಾಗಿ ಶ್ರೀ ಎಸ್.ಡಿ, ವಕೀಲರು)*

| | | |
|---|---|---|
| 1. ಕೃತ್ಯ ನಡೆದ ದಿನಾಂಕ | : | 19.03.2011 |
| 2. ಕೃತ್ಯ ವರದಿ ಮಾಡಿದ ದಿನಾಂಕ | : | 29.08.2018 |
| 3. ದೂರುದಾರರ ಹೆಸರು | : | ವಾಹಿದ |
| 4. ಸಾಕ್ಷಿದಾರರ ಹೇಳಿಕೆಯ ದಿನಾಂಕ | : | 25.08.2022 |
| 5. ಸಾಕ್ಷಿದಾರರ ಹೇಳಿಕೆಯು ಮುಕ್ತಾಯವಾದ ದಿನಾಂಕ | : | 25.06.2026 |
| 6. ಆರೋಪಿಸಿದ ಕಲಂಗಳು | : | ಭಾರತ ದಂಡ ಸಂಹಿತೆ ಕಲಂ.498 ಎ ಮತ್ತು ವ.ನಿ.ಕಾ.ಕಲಂ 3 ಮತ್ತು 4 |

7. ನ್ಯಾಯಾಲಯದ ತೀರ್ಮಾನ : ನಿರ್ದೋಷಿ

YOGESH M R
Digitally signed by YOGESH M R
Date: 2026.08.14 16:03:56 +0530

**(ಯೋಗೇಶ ಎಂ.ಆರ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಮೂಡಿಗೆರೆ.

**-: ತೀರ್ಪು :-**

ಮೂಡಿಗೆರೆ ಠಾಣಾ ಆರಕ್ಷಕರು, ಮೂಡಿಗೆರೆ ತಾಲ್ಲೂಕು ಇವರು ಆರೋಪಿ ವಿರುದ್ಧ ಭಾರತ ದಂಡ ಸಂಹಿತೆ ಕಲಂ. 498 ಎ ಮತ್ತು ವರದಕ್ಷಿಣೆ ನಿಷೇಧಾ ಕಾಯಿದೆ ಕಲಂ 3 ಮತ್ತು 4 ರ ರೀತ್ಯಾ ದಂಡನೀಯವಾದ ಅಪರಾಧಗಳಿಗಾಗಿ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

**2.** ಮಾನ್ಯ ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ,

ಪೂಂಜಾಲಕಟ್ಟೆ ಬದ್ರಿಯಾ ಜುಮ್ಮಾ ಮಸೀದಿಯಲ್ಲಿ ದಿನಾಂಕ 21.08.2008 ರಂದು ಚಾಸಾ-1 ಶ್ರೀಮತಿ ವಹಿದಾ ರವರೊಂದಿಗೆ ಆರೋಪಿಯು ಮದುವೆಯಾಗಿದ್ದು, ಮದುವೆ ಸಮಯದಲ್ಲಿ ವರನ ಬೇಡಿಕೆಯಂತೆ, 3 ಲಕ್ಷ ರೂಪಾಯಿ ನಗದು ಹಣ, ಬೆಳೆಬಾಳುವ ವಾಚ್ ಮತ್ತು ಒಂದು ಜೊತೆ ಸೂಟ್ ನ್ನು ವರದಕ್ಷಿಣೆಯಾಗಿ ನೀಡಿದ್ದು ಹಾಗೂ ಚಾಸಾ-1 ರವರಿಗೆ 80 ಗ್ರಾಮ ಚಿನ್ನದ ನಕ್ಲೆಸ್, 25 ಗ್ರಾಂ ನ ಒಂದು ಚಿನ್ನದ ನಕ್ಲೆಸ್, 64 ಗ್ರಾಂನ ಒಂದು ಚಿನ್ನದ ಸೊಂಟದ ಪಟ್ಟಿ, 56 ಗ್ರಾಂನ 4 ಚಿನ್ನದ ಬಳೆಗಳು, 14 ಗ್ರಾಂನ ಒಂದು ಚಿನ್ನದ ಓಲೆ ಒಟ್ಟು 240 ಗ್ರಾಂ ಚಿನ್ನವನ್ನು ಕೊಟ್ಟು ಮದುವೆ ಮಾಡಿದ್ದು ಮದುವೆಯಾದ 20 ದಿನಗಳು ಮಾತ್ರ ಆರೋಪಿಯು ಚಾಸಾ-1 ರವರೊಂದಿಗೆ ಅನ್ಯೋನ್ಯವಾಗಿದ್ದು, ನಂತರ ಚಾಸಾ1 ರವರಿಗೆ ಆಟೋ ಖರೀದಿಸಲು ಇನ್ನೂ ಹೆಚ್ಚುವರಿ ವರದಕ್ಷಿಣೆ ಯಾಗಿ ತೆಗೆದುಕೊಂಡು ಬಾ ಇಲ್ಲದಿದ್ದರೆ ನಿನ್ನನ್ನು ಮನೆಯಿಂದ ಹೊರಗೆ ಹಾಕುವುದಾಗಿ ಹೇಳಿದ್ದು, ದಿನಾಂಕ 17.03.2011 ರಂದು ಚಾಸಾ1 ರವರಿಗೆ ಹೊಡೆದು ಕೊಲೆ ಬೆದರಿಕೆ ಹಾಕಿ ಚಾಸಾ1 ರವರನ್ನು ಮತ್ತು 9 ವರ್ಷದ ಫಾತಿಮಾರಿಂದ ಅವರ ಬಳಿ ಇದ್ದ ಚಿನ್ನದ ಒಡವೆಗಳನ್ನು ಕಿತ್ತುಕೊಂಡು ಮನೆಯಿಂದ ಹೊರಗೆ ಹಾಕಿದ್ದಲ್ಲದೇ, ಅನೇಕ

ಬಾರಿ ಪಂಚಾಯಿತಿ ಮಾಡಿದ್ದು ಹಾಗೂ ದಿನಾಂಕ 13.06.2018 ರಂದು ಆರೋಪಿಯು ಇನ್ನೊಂದು ಮದುವೆಯಾಗಿರುವ ಬಗ್ಗೆ ವಿಚಾರಿಸಿದಾಗ ಅವಾಚ್ಯ ಶಬ್ದಗಳಿಂದ ಬೈದು, ಕೈಯಿಂದ ಹೊಡೆದು ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡಿರುತ್ತಾರೆಂದು ಆರೋಪಿ ವಿರುದ್ಧ ಮೇಲ್ಕಂಡ ಕಲಂಗಳ ಅಡಿಗಳಲ್ಲಿ ಮೂಡಿಗೆರೆ ಠಾಣಾ ಆರಕ್ಷಕರು ಪ್ರಕರಣವನ್ನು ದಾಖಲಿಸಿರುತ್ತಾರೆ.

**3.** ಮೂಡಿಗೆರೆ ಠಾಣಾ ಆರಕ್ಷಕರು, ಚಾಸಾ.17 ರಾಮಚಂದ್ರ.ವೈ.ಪಿ ಚಾಸಾ1 ರವರು ನೀಡಿದ ಹೇಳಿಕೆ ದೂರನ್ನು ಸ್ವೀಕರಿಸಿ, ಠಾಣಾ ಮೊಕದ್ದಮೆ ಸಂ.142/2018 ರಂತೆ ಪ್ರ.ವ.ವರದಿಯನ್ನು ದಾಖಲಿಸಿರುತ್ತಾರೆ. ನಂತರ ಚಾಸಾ.18 ಎಂ.ಜಗಧೀಶ್ ರವರು ಸಾಕ್ಷ್ಯಾಧಾರಗಳನ್ನು ಪಡೆದು, ತನಿಖೆಯನ್ನು ಪೂರ್ಣಗೊಳಿಸಿ ಆರೋಪಿ ವಿರುದ್ಧ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

**4.** ತನಿಖಾಧಿಕಾರಿಯು ಅಂತಿಮ ವರದಿಯನ್ನು ಸಲ್ಲಿಸಿದ ನಂತರ, ನ್ಯಾಯಾಲಯವು ಪ್ರಕರಣದಲ್ಲಿ ಆರೋಪಿ ವಿರುದ್ಧ ಮೇಲ್ಕಂಡ ಕಲಂಗಳ ಅಡಿಗಳಲ್ಲಿ ಸಂಜ್ಞಾನವನ್ನು ತೆಗೆದುಕೊಂಡಿರುತ್ತದೆ.

**5.** ಆರೋಪಿ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ. ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರಡಿಯಲ್ಲಿ ಅಭಿಯೋಜನೆಯ ದಾಖಲೆಗಳನ್ನು ಪೂರೈಸಲಾಗಿರುತ್ತದೆ. ದೋಷಾರೋಪಣೆಯನ್ನು ರಚಿಸುವ ಪೂರ್ವದಲ್ಲಿ ವಾದವನ್ನು ಆಲಿಸಿ, ನಂತರ ಆರೋಪಿ ವಿರುದ್ಧ ಭಾರತ ದಂಡ ಸಂಹಿತೆ ಕಲಂ.498 ಎ ಮತ್ತು ವರದಕ್ಷಿಣೆ ನಿಷೇಧಾ ಕಾಯಿದೆ ಕಲಂ 3 ಮತ್ತು 4 ರಡಿಗಳಲ್ಲಿ ದೋಷಾರೋಪಣೆಯನ್ನು ರಚಿಸಿ, ಓದಿ ಹೇಳಲಾಯಿತು, ಆರೋಪಿ ತಪ್ಪನ್ನು ಒಪ್ಪಿಕೊಳ್ಳದೇ ವಿಚಾರಣೆಯಾಗಬೇಕೆಂದು ತಿಳಿಸಿರುತ್ತಾರೆ.

**6.** ಆರೋಪಿ ವಿರುದ್ಧ ಮಾಡಿರುವ ದೋಷಾರೋಪಣೆಯನ್ನು ಸಾಭೀತುಪಡಿಸುವ ಉದ್ದೇಶದಿಂದ, ಮಾನ್ಯ ಅಭಿಯೋಜನೆಯು ತಮ್ಮ ಪರವಾಗಿ ಅಂತಿಮ ವರದಿಯಲ್ಲಿ ನಮೂದಿಸಿರುವ 18 ಸಾಕ್ಷಿಗಳ ಪೈಕಿ, 5 ಸಾಕ್ಷಿಗಳನ್ನು ಕ್ರಮವಾಗಿ ಫ್ರಾಸಾ.1

ರಿಂದ ಫ್ರಾಸಾ.5 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿ, ನಿಪಿ.1 ರಿಂದ ನಿಪಿ.30 ರಂತೆ ದಾಖಲೆಗಳನ್ನು ಹಾಗೂ ಸಹಿಗಳನ್ನು ಗುರುತಿಸಿಕೊಂಡು, ತಮ್ಮ ಪರ ಸಾಕ್ಷಿಗಳ ವಿಚಾರಣೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತದೆ. ನಂತರ ಮಾನ್ಯ ಅಭಿಯೋಜನೆಯ ಪರ ಸಾಕ್ಷ್ಯದಲ್ಲಿ, ಆರೋಪಿ ವಿರುದ್ಧವಾದ ಸನ್ನಿವೇಶಗಳನ್ನು ಆರೋಪಿಗೆ ಓದಿ ಹೇಳಿ, ಆರೋಪಿ ನೀಡಿದ ಉತ್ತರಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.313ರ ಅಡಿಯಲ್ಲಿ ವಿಚಾರಣಾ ಕಾಲಕ್ಕೆ ನಮೂದಿಸಿಕೊಂಡಿರುತ್ತದೆ. ಆರೋಪಿ ತಮ್ಮ ಪರ ಯಾವುದೇ ಮೌಖಿಕ ಅಥವಾ ದಾಖಲೆಗಳ ಸಾಕ್ಷ್ಯವಿಲ್ಲವೆಂದು ನುಡಿದ ಕಾರಣ, ಅವರ ಪರ ಪ್ರತಿರಕ್ಷಾ ಸಾಕ್ಷ್ಯ ಇಲ್ಲವೆಂದು ಪರಿಗಣಿಸಿ, ವಾದ-ವಿವಾದಗಳಿಗೆ ಪ್ರಕರಣವನ್ನು ಕಾಯ್ದಿರಿಸಲಾಗಿದೆ. ಆದರೆ, ಆರೋಪಿಯು ಫ್ರಾಸಾ1 ರವರನ್ನು ಎದುರು ವಿಚಾರಣೆಗೆ ಒಳಪಡಿಸುವ ಮೂಲಕ ಒಂದು ದಾಖಲೆಯನ್ನು ನಿಡಿ.1 ಎಂದು ಗುರುತಿಸಿಕೊಂಡಿರುತ್ತಾರೆ.

**7.** ಉಭಯ ಪಕ್ಷಗಾರ ವಕೀಲರುಗಳ ವಾದ-ವಿವಾದಗಳನ್ನು ಆಲಿಸಿ ಮತ್ತು ಸಾಕ್ಷ್ಯಾಧಾರಗಳನ್ನು ಗಮನದಲ್ಲಿರಿಸಿಕೊಂಡು ಅವಲೋಕಿಸಿದಾಗ, ಈ ಪ್ರಕರಣದಲ್ಲಿ ನ್ಯಾಯಾಲಯದ ಪರಿಗಣನೆಗೆ ಉದ್ಭವಿಸುವ ಅಂಶಗಳು ಈ ಕೆಳಕಂಡಂತಿವೆ,

ಅಂಶಗಳು

***1.*** *ಪೂಂಜಾಲಕಟ್ಟೆ ಬದ್ರಿಯಾ ಜುಮ್ಮಾ ಮಸೀದಿಯಲ್ಲಿ ದಿನಾಂಕ 21.08.2008 ರಂದು ಚಾಸಾ-1 ಶ್ರೀಮತಿ ವಹಿದಾ ರವರೊಂದಿಗೆ ಆರೋಪಿಯು ಮದುವೆಯಾಗಿದ್ದು, ಮದುವೆ ಸಮಯದಲ್ಲಿ ವರನ ಬೇಡಿಕೆಯಂತೆ 3 ಲಕ್ಷ ರೂಪಾಯಿ ನಗದು ಹಣ, ಬೆಳೆಬಾಳುವ ವಾಚ್ ಮತ್ತು ಒಂದು ಜೊತೆ ಸೂಟ್ ನ್ನು ವರದಕ್ಷಿಣೆಯಾಗಿ ನೀಡಿದ್ದು ಹಾಗೂ ಚಾಸಾ-1 ರವರಿಗೆ 80 ಗ್ರಾಮ ಚಿನ್ನದ ನಕ್ಲೆಸ್, 25 ಗ್ರಾಂ ನ ಒಂದು ಚಿನ್ನದ ನಕ್ಲೆಸ್, 64 ಗ್ರಾಂನ ಒಂದು ಚಿನ್ನದ ಸೊಂಟದ ಪಟ್ಟಿ, 56 ಗ್ರಾಂನ 4 ಚಿನ್ನದ ಬಳೆಗಳು, 14 ಗ್ರಾಂನ ಒಂದು ಚಿನ್ನದ ಓಲೆ ಒಟ್ಟು 240 ಗ್ರಾಂ ಚಿನವನು ಕೊಟ್ಟು ಮದುವೆ ಮಾಡಿದ್ದು ಮದುವೆಯಾದ 20 ದಿನಗಳು ಮಾತ್ರ ಆರೋಪಿಯು ಚಾಸಾ-1 ರವರೊಂದಿಗೆ ಅನ್ಯೋನ್ಯವಾಗಿದ್ದು, ನಂತರ ಚಾಸಾ1 ರವರಿಗೆ ಆಟೋ ಖರೀದಿಸಲು ಇನ್ನೂ ಹೆಚ್ಚುವರಿ ವರದಕ್ಷಿಣೆ ಯಾಗಿ ತೆಗೆದುಕೊಂಡು ಬಾ ಇಲ್ಲದಿದ್ದರೆ ನಿನ್ನನ್ನು ಮನೆಯಿಂದ ಹೊರಗೆ ಹಾಕುವುದಾಗಿ ಹೇಳಿದ್ದು, ದಿನಾಂಕ 17.03.2011 ರಂದು ಚಾಸಾ1 ರವರಿಗೆ ಹೊಡೆದು ಕೊಲೆ ಬೆದರಿಕೆ ಹಾಕಿ ಚಾಸಾ1 ರವರನ್ನು ಮತ್ತು 9*

*ವರ್ಷದ ಘಾತಿಮಾರಿಂದ ಅವರ ಬಳಿ ಇದ್ದ ಚಿನ್ನದ ಒಡವೆಗಳನ್ನು ಕಿತ್ತುಕೊಂಡು ಮನೆಯಿಂದ ಹೊರಗೆ ಹಾಕಿದ್ದಲ್ಲದೇ, ಅನೇಕ ಬಾರಿ ಪಂಚಾಯಿತಿ ಮಾಡಿದ್ದು ಹಾಗೂ ದಿನಾಂಕ 13.06.2018 ರಂದು ಆರೋಪಿಯು ಇನ್ನೊಂದು ಮದುವೆಯಾಗಿರುವ ಬಗ್ಗೆ ವಿಚಾರಿಸಿದಾಗ ಅವಾಚ್ಯ ಶಬ್ದಗಳಿಂದ ಬೈದು, ಕೈಯಿಂದ ಹೊಡೆದು ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡಿದ್ದು, ಆ ಮೂಲಕ ಆರೋಪಿಯು ಭಾ.ದಂ.ಸಂ.ಕಲಂ.498 ಎ ರಡಿಯಲ್ಲಿ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?*

**2.** *ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ* ಆರೋಪಿಯಾದ ನೀವು ಮದುವೆಯ ಸಮಯದಲ್ಲಿ ೩ ಲಕ್ಷ ರೂಪಾಯಿ ನಗದು ಹಣ, ಬೆಳೆಬಾಳುವ ವಾಚ್ ಮತ್ತು ಒಂದು ಜೊತೆ ಸೂಟ್ ನ್ನು ವರದಕ್ಷಿಣೆಯಾಗಿ ನೀಡಿದ್ದು ಹಾಗೂ ಸಾಕ್ಷಿ-೧ ರವರಿಗೆ ೮೦ ಗ್ರಾಮ ಚಿನ್ನದ ನಕೇಸ್, ೨೫ ಗ್ರಾಂ ನ ಒಂದು ಚಿನ್ನದ ನಕೇಸ್, ೬೪ ಗ್ರಾಂನ ಒಂದು ಚಿನ್ನದ ಸೊಂಟದ ಪಟ್ಟಿ, ೫೬ ಗ್ರಾಂನ ೪ ಚಿನ್ನದ ಬಳೆಗಳು, ೧೪ ಗ್ರಾಂನ ಒಂದು ಚಿನ್ನದ ಓಲೆ ಒಟ್ಟು ೨೪೦ ಗ್ರಾಂ ಚಿನ್ನವನ್ನು ವರದಕ್ಷಿಣೆಯಾಗಿ ಪಡೆದಿದ್ದು ಹಾಗೂ ಆಟೋ ಖರೀದಿಸಲು ಇನ್ನೂ ಹೆಚ್ಚುವರಿ ವರದಕ್ಷಿಣೆ ಹಣವನ್ನು ತರುವಂತೆ ಪೀಡಿಸಿದ್ದು, *ಆ ಮೂಲಕ ಆರೋಪಿಯು ವ.ನಿ.ಕಾ.ಕಲಂ.3 ಮತ್ತು 4 ರಡಿಯಲ್ಲಿ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?*

**3.** *ಯಾವ ಆದೇಶ ?*

**8.** ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಗಳು**,**

| | | |
|---|---|---|
| ಅಂಶ-1 ಮತ್ತು 2 | : | ನಕಾರಾತ್ಮಕವಾಗಿ |
| ಅಂಶ-3 | : | ಅಂತಿಮ ಆದೇಶದಂತೆ |

ಈ ಕೆಳಕಂಡ ಕಾರಣಗಳಿಗಾಗಿ,

**-: ಕಾ ರ ಣ ಗ ಳು :-**

ಅಂಶ**-1** ಮತ್ತು **2 :-**

**9.** ಈ ಎಲ್ಲ ಅಂಶಗಳು ಒಂದಕ್ಕೊಂದು ಪೂರಕವಾಗಿರುವ ಕಾರಣ, ಸಾಕ್ಷ್ಯದ ವಿಮರ್ಶೆಯ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಚರ್ಚಿಸಲು ಒಟ್ಟಿಗೆ ತೆಗೆದುಕೊಳ್ಳಲಾಯಿತು.

**10.** ಮಾನ್ಯ ಅಭಿಯೋಜನೆಯು ತಮ್ಮ ವಾದವನ್ನು ಸಾಭೀತುಪಡಿಸಲು, ಈ ಪ್ರಕರಣದ ದೂರುದಾರರದ ಚಾಸಾ.1 ವಾಹಿದಾ ರವರನ್ನು ಪ್ರಾಸಾ.1 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿ ನನ್ನ ಗಂಡ. ನಾನು ಮತ್ತು ಆರೋಪಿ ದಿನಾಂಕ:21.08.2008 ರಂದು ಪುಂಜಲಕಟ್ಟೆಯ ಬದ್ರಿಯಾ ಜುಮ್ಮಾ ಮಸೀದಿಯಲ್ಲಿ ಗುರುಹಿರಿಯರ ಸಮ್ಮುಖದಲ್ಲಿ ಮುಸ್ಲಿಂ ಸಮೂದಾಯದ ಪದ್ಧತಿಗಳಂತೆ ಮದುವೆ ಮಾಡಿಕೊಂಡಿರುತ್ತೇವೆ. ವಿವಾಹದ ಸಂದರ್ಭದಲ್ಲಿ ಆರೋಪಿಯ ಬೇಡಿಕೆಯ ಅನುಸಾರ 3 ಲಕ್ಷ ಹಣ, 240 ಗ್ರಾಂ ಚಿನ್ನ ನೀಡಿದ್ದೆವು. ಮದುವೆಯಾದ ನಂತರ ನಾನು ಆರೋಪಿಯ ಮನೆಗೆ ಹೋಗಿದ್ದು ಅಲ್ಲಿ ಕೇವಲ 20 ದಿನಗಳು ಮಾತ್ರ ಅನ್ಯೋನ್ಯವಾಗಿದ್ದೆವು. ತದನಂತರ ಆರೋಪಿಯು ತಾನು ಆಟೋ ರಿಕ್ಷಾ ಖರೀದಿ ಮಾಡಬೇಕೆಂದು 1 ಲಕ್ಷ ಕೊಡುವಂತೆ ನನ್ನಲ್ಲಿ ಕೇಳಿರುತ್ತಾರೆ. ನನ್ನ ತವರು ಮನೆಯಲ್ಲಿ ಆರ್ಥಿಕ ಅಡಚಣೆ ಇದ್ದುದರಿಂದ ನನಗೆ ಕೊಡಲಾಗಿರಲಿಲ್ಲ. ಅದನ್ನೇ ನೆಪವಾಗಿಟ್ಟುಕೊಂಡು ನನ್ನ ಅತ್ತೆ ಐಸಮ್ಮ, ಆರೋಪಿ, ಮೈದುನ ಲತೀಫ್, ಭಾವ ಹಸೈನಾರ್ ಹಾಗೂ ಅವರ ಹೆಂಡತಿ ಜೈನಾಬಿ ಹಾಗೂ ಅವರ ಮಕ್ಕಳಾದ ಮುಸ್ತಫ, ಅನೀಫ್ ಮತ್ತು ಅಸ್ಮಾ, ಇನ್ನೊರ್ವ ಭಾವನಾದ ಇಬ್ರಾಹಿಂರವರ ಹೆಂಡತಿ ಜಮೀಲ, ಅವರ ಮಗ ಅಶ್ರಫ್, ನಾದಿನಿ ಮೈಮುನಾ ಹಾಗೂ ಆಕೆಯ ಗಂಡ ಮಹಮ್ಮದ್ ಮುಸ್ಲಿಯಾರ್, ಅವರ ಮಗಳು ನಾಜಿಯರವರೆಲ್ಲರೂ ಸೇರಿ ನನಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿರುತ್ತಾರೆ. ಆ ಬಗ್ಗೆ ನಾನು ಕುಟುಂಬದಲ್ಲಿ ಹೇಳಿದಾಗ, ಕುಟುಂಬದ ಸದಸ್ಯರು 3 ಬಾರಿ ಪಂಚಾಯಿತಿ ನಡೆಸಿ, ಎಲ್ಲಾ ಸರಿ ಹೋಗುತ್ತದೆ ಸ್ವಲ್ಪ ತಾಳ್ಮೆಯಿಂದ ಇರು ಎಂದು ಹೇಳಿ ಕಳುಹಿಸಿದ್ದರು. ಆದರೆ ಅವರೆಲ್ಲರೂ ದೈಹಿಕ ಮತ್ತು ಮಾನಸಿಕ ಹಿಂಸೆಯನ್ನು ಮತ್ತೆ ಮತ್ತೆ ಮುಂದುವರೆಸುತ್ತಿದ್ದರು.

**11.** ಮುಂದುವರೆದು, ದಿನಾಂಕ:17.03.2011 ರಂದು ಮೇಲೆ ಹೇಳಿದ 13 ಜನರು ಸೇರಿಕೊಂಡು ನನ್ನನ್ನು ಮತ್ತು ನನ್ನ 9 ತಿಂಗಳ ಮಗುವಾದ ಫಾತಿಮಾರವನ್ನು, ನಮ್ಮ ಮೈಮೇಲಿದ್ದ ಚಿನ್ನವನ್ನು ತೆಗೆದುಕೊಂಡು ಮನೆಯಿಂದ ಹೊರಗೆ ಹಾಕಿ, ಹಣ ತರಬೇಕೆಂದು ಬೇಡಿಕೆ ಇಟ್ಟಿರುತ್ತಾರೆ. ತದನಂತರ ದಿನಾಂಕ:24.12.2011 ರಂದು ಪುಂಜಲಕಟ್ಟೆಯ ನಂದಗೋಕುಲ ಹಾಲ್‌ನಲ್ಲಿ ಊರ ಹಿರಿಯ ಸಮಕ್ಷಮ ಪಂಚಾಯಿತಿ ಮಾಡಿ ನನ್ನನ್ನು ಆರೋಪಿಯ ಮನೆಗೆ ಕಳುಹಿಸಿಕೊಡುವಂತೆ ತೀರ್ಮಾನವಾಗಿರುತ್ತದೆ.

ಆದರೆ ಆರೋಪಿ ನನ್ನನ್ನು ಕರೆದುಕೊಂಡು ಹೋಗಿರುವುದಿಲ್ಲ. ತದನಂತರ ದಿನಾಂಕಃ27.11.2012 ರಂದು ಪುಂಜಲಕಟ್ಟೆಯ ಬದ್ರಿಯಾ ಮಸೀದಿಯವರು ನನ್ನ ಮತ್ತು ಆರೋಪಿಯ ನಡುವಿನ ಸಮಸ್ಯೆಯನ್ನು ಬಗ್ಗೆ ಹರಿಸುವಂತೆ ಮೊಹಿದ್ದೀನ್ ಜುಮ್ಮಾ ಮಸೀದಿರವರಿಗೆ ಕೋರಿರುತ್ತಾರೆ. ದಿನಾಂಕಃ08.12.2012 ರಂದು ಆ ಬಗ್ಗೆ ಪಂಚಾಯಿತಿ ನಡೆದು ಎರಡೂ ಕುಟುಂಬದವರನ್ನು ಸೇರಿಸಿ ನನ್ನನ್ನು ಆರೋಪಿಯ ಮನೆಗೆ ಕರೆದುಕೊಂಡು ಹೋಗುವಂತೆ ತೀರ್ಮಾನವಾಯಿತು. ಆದರೆ ಆರೋಪಿ ನನ್ನನ್ನು ಕರೆದುಕೊಂಡು ಹೋಗಲಿಲ್ಲ. ಆ ಸಂದರ್ಭದಲ್ಲಿ ಆರೋಪಿ ನೀನು ಈಗ ನಿನ್ನ ತಾಯಿಯ ಮನೆಗೆ ಹೋಗು, ಹಣ ತರದೆ ನಿನ್ನನ್ನು ನಮ್ಮ ಮನೆಗೆ ಸೇರಿಸುವುದಿಲ್ಲ ಹಾಗೂ ಪ್ರತ್ಯೇಕ ಮನೆ ಮಾಡಿದ ನಂತರ ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿರುತ್ತಾರೆ. ಆದರೆ ನಾನು ಸಾಕಷ್ಟು ಸಮಯ ಕಾದರು ಸಹ ಆರೋಪಿ ನನ್ನನ್ನು ಪ್ರತ್ಯೇಕ ಮನೆ ಮಾಡಿ ಕರೆದುಕೊಂಡು ಹೋಗಿರುವುದಿಲ್ಲ. ಆದಕಾರಣ ನಾನೇ ಆರೋಪಿಯ ಮನೆಗೆ ಹೋದಾಗ ನನ್ನ ಅತ್ತೆ ಐಸಮ್ಮ ಮತ್ತು ಭಾವ ಹಸೈನಾರ್ ರವರುಗಳು ಹಣ ತರದೆ ಮನೆಯೊಳಗೆ ನುಗ್ಗಿದರೆ ಕೈಕಾಲು ಮುರಿದು ಹಾಕುತ್ತೇವೆ ಎಂದು ನನ್ನನ್ನು ಮನೆಯ ಒಳಗಡೆ ಹೋಗಲು ಬಿಟ್ಟಿರುವುದಿಲ್ಲ. ತದನಂತರ 2018 ರಲ್ಲಿ ಆರೋಪಿ ಬೇರೆ ಮದುವೆಯಾಗಿರುವ ಬಗ್ಗೆ ನನಗೆ ಗೊತ್ತಾಯಿತು.

**12.** ಮುಂದುವರೆದು, ದಿನಾಂಕಃ13.06.2018 ರಂದು ಸಂಜೆ 4.00 ಗಂಟೆಗೆ ನಾನು ನನ್ನ ತಾಯಿಯ ಮನೆಯಲ್ಲಿದ್ದಾಗ ಆರೋಪಿ, ನನ್ನ ಅತ್ತೆ ಐಸಮ್ಮ ಮತ್ತು ಭಾವ ಹಸೈನಾರ್ ಆಟೋದಲ್ಲಿ ಬಂದಿರುತ್ತಾರೆ. ಆಗ ನಾನು ಅರೋಪಿಯನ್ನು 3 ನೇ ಮದುವೆಯಾಗಿರುವ ಬಗ್ಗೆ ವಿಚಾರಿಸಿರುತ್ತೇನೆ. ಆಗ ಆರೋಪಿಯು ನಾನು ಒಂದಲ್ಲ ಇನ್ನೂ 3 ಮದುವೆಯಾಗುತ್ತೇನೆ, ನೀನು ಯಾರು ಕೇಳಲು ಎಂದು ಅವಾಚ್ಯ ಶಬ್ದಗಳಿಂದ ಬೈದು, ನನ್ನ ಮೇಲೆ ಹಲ್ಲೆ ನಡೆಸಿ ಹೋಗಿರುತ್ತಾರೆ. ಇದರಿಂದ ನಾನು ಮಾನಸಿಕವಾಗಿ ನೊಂದಿರುತ್ತೇನೆ. ಮರುದಿನ ಆ ಕುರಿತು ಪುಂಜಲಕಟ್ಟೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆಯನ್ನು ಪಡೆದಿರುತ್ತೇನೆ. ತದನಂತರ ಆರೋಪಿಯ ವಿರುದ್ಧ ಪುಂಜಲಕಟ್ಟೆ ಪೋಲಿಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ. ಆರೋಪಿಯು ಪೊಲಿಸರು ಕರೆದಾಗ ಪೋಲಿಸ್ ಠಾಣೆಗೆ ಬಂದಿರುವುದಿಲ್ಲ. ಆದಕಾರಣ ದಿನಾಂಕಃ02.07.2018 ರಂದು ಮಹಿಳಾ

ಸಾಂತ್ವನ ಕೇಂದ್ರ, ಬೆಳ್ತಂಗಡಿಯಲ್ಲಿ ದೂರು ದಾಖಲಿಸಿರುತ್ತೇನೆ. ದಿನಾಂಕಃ16.07.2018 ರಂದು ಸದರಿ ಸಾಂತ್ವನ ಕೇಂದ್ರದವರು ವಿಚಾರಣೆ ಮಾಡಿದಾಗ ಆರೋಪಿಯು ಮತ್ತೊಂದು ಮದುವೆಯಾಗಿರುವುದನ್ನು ಒಪ್ಪಿಕೊಂಡಿದ್ದು, ಹಾಗೂ ತನ್ನ ನಿರ್ಧಾರವನ್ನು ಹೇಳಲು ಒಂದು ವಾರ ಸಮಯ ತೆಗೆದುಕೊಂಡಿರುತ್ತಾರೆ. ತದನಂತರ ಯಾವುದೇ ಸಂಪರ್ಕಕ್ಕೆ ಸಿಗದೇ ತಪ್ಪಿಸಿಕೊಂಡಿರುತ್ತಾರೆ. ಕಾರಣ ನಾನು ದಿನಾಂಕಃ01.08.2018 ರಂದು ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತೇನೆ. ಸದರಿ ಪೋಲಿಸರು ಚಿಕ್ಕಮಗಳೂರಿನ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕೌನ್ಸಲಿಂಗ್‌ಗೆ ನನ್ನನ್ನು ಕಳುಹಿಸಿರುತ್ತಾರೆ.

**13.** ಮುಂದುವರೆದು, ದಿನಾಂಕಃ10.08.2018 ರಂದು ಅಲ್ಲಿ ಕೌನ್ಸಲಿಂಗ್ ನಡೆದಾಗ ಆರೋಪಿಯು ನನಗೆ ಅಥವಾ ನನ್ನ ಮಗುವಿಗೆ ಜೀವನಾಂಶ ನೀಡಲು ಒಪ್ಪಿರುವುದಿಲ್ಲ. ಆ ಕಾರಣ ಸದರಿ ಕಾನೂನು ಸೇವಾ ಪ್ರಾಧಿಕಾರ ಮುಂದಿನ ಕಾನೂನು ಕ್ರಮ ತೆಗೆದುಕೊಳ್ಳುವಂತೆ ನನಗೆ ಸೂಚಿಸಿರುತ್ತಾರೆ. ತದನಂತರ ದಿನಾಂಕಃ29.08.2018 ರಂದು ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ನಾನು ಮತ್ತೊಂದು ದೂರು ದಾಖಲಿಸಿರುತ್ತೇನೆ. ದೂರು ದಾಖಲಾದ ನಂತರ ಪೋಲಿಸರು ಮೂಡಿಗೆರೆಯ ಬಾಪುನಗರದ ಸಂತೆಮೈದಾನದ ಆರೋಪಿಯ ಮನೆಯಲ್ಲಿ ಮಹಜರ್ ಮಾಡಿ ಪಂಚನಾಮೆಯನ್ನು 10.45 ರಿಂದ 11.45 ರವರೆಗೆ ಬರೆದು, ನನ್ನ ಸಹಿ ಪಡೆದು, ಫೋಟೋ ತೆಗೆದು, ಕಚ್ಚಾನಕಾಶೆಯನ್ನು ತೆಗೆದಿರುತ್ತಾರೆ. ಸದರಿ ಕಾಲಕ್ಕೆ ಚಾಸಾ 8 ಅನೀಫ್ ಮತ್ತು 9 ರವರು ಸಹ ಹಾಜರಿದ್ದರು. ದಿನಾಂಕಃ01.09.2018 ರಂದು ಪೋಲಿಸರು ಮಧ್ಯಾಹ್ನ 12.15 ರಿಂದ 1.00 ಗಂಟೆಯವರೆಗೆ ಮಹಜರ್ ಮಾಡಿ, ಮದುವೆ ಕಾಲದಲ್ಲಿ ತೆಗೆದಿದ್ದ ಫೋಟೋಗಳನ್ನು ಹಾಗೂ ಮದುವೆಗೆ ಸಂಬಂಧಿಸಿದ ದಾಖಲಾತಿಗಳನ್ನು ನನ್ನಿಂದ ವಶಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಗೆ ನಾನು ಸಹ ಸಹಿ ಹಾಕಿದ್ದು, ಅದನ್ನು ಚಾಸಾ 8 ಮತ್ತು 9 ರವರ ಸಮಕ್ಷಮ ಮಾಡಲಾಗಿರುತ್ತದೆ. ತದನಂತರ ಅದೇ ದಿನ ಪೋಲಿಸರು ನನ್ನ ಮರುಹೇಳಿಕೆಯನ್ನು ಪಡೆದಿರುತ್ತಾರೆ. ದಿನಾಂಕಃ12.09.2018 ರಂದು ಪೋಲಿಸರು ಪುಂಜಲಕಟ್ಟೆಯ ನನ್ನ ತಾಯಿ ಮನೆಗೆ ಬಂದಿದ್ದು ಅಲ್ಲಿ ಮಧ್ಯಾಹ್ನ 12.30 ರಿಂದ 1.30 ರ ಅವಧಿಯಲ್ಲಿ ಮಹಜರ್ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಸದರಿ ಕಾಲಕ್ಕೆ

ಚಾಸಾ 8 ಮತ್ತು 10 ಪಂಚರಾಗಿ ಹಾಜರಿದ್ದರು. ಪೋಲಿಸರು ಆರೋಪಿಯ ಸಂಬಂಧಿಕರನ್ನು ದೋಷಾರೋಪಣಾ ಪಟ್ಟಿ ಸಲ್ಲಿಸುವಾಗ ಕೈಬಿಟ್ಟಿರುತ್ತಾರೆ. ಸಾಕ್ಷಿಯು ದಿ.29.08.2018 ರ ದೂರು, ಪ್ರ.ವ.ವರದಿ, ಎರಡು ಸ್ಥಳ ಮಹಜರ್, ಸದರಿ ಮಹಜರ್ ಗಳಿಗೆ ಅಡಕಗೊಂಡ ಪೋಟೋಗಳು, ಅಮಾನತ್ತು ಮಹಜರ್, ಸದರಿ ಮಹಜರ್ ಗೆ ಸಂಬಂಧಪಟ್ಟ ಎರಡು ಪೋಟೋಗಳು, ವಿವಾಹ ಕಾಲದ ಎರಡು ಪೋಟೋಗಳು, ವಿವಾಹ ದಾಖಲು ರಿಜಿಸ್ಟರ್ ಎಕ್ಸಟ್ರ್ಯಾಕ್ಟ್ ಮತ್ತು ದಿ.01.08.2018 ರ ದೂರನ್ನು ನೋಡಿ ಗುರುತಿಸುತ್ತಾರೆ. ದಿ.29.08.2018 ರ ದೂರನ್ನು ನಿಪಿ-1, ಪ್ರ.ವ.ವರದಿಯನ್ನು ನಿಪಿ-2, ಸ್ಥಳ ಮಹಜರ್ ಗಳನ್ನು ಪೋಟೋಗಳೊಂದಿಗೆ ಕ್ರಮವಾಗಿ ನಿಪಿ-3 ರಿಂದ 8, ಅಮಾನತ್ತು ಮಹಜರ್ ನ್ನು ಪೋಟೋಗಳೊಂದಿಗೆ ನಿಪಿ-9 ರಿಂದ 11, ವಿವಾಹ ಕಾಲದ ಪೋಟೋಗಳನ್ನು ಸಿಡಿ ಮತ್ತು ಪ್ರಮಾಣಪತ್ರದೊಂದಿಗೆ ನಿಪಿ-12 ರಿಂದ 15 ಮತ್ತು ದಿ.01.08.2018 ರ ದೂರು ಹಾಗೂ ವಿವಾಹ ದಾಖಲು ರಿಜಿಸ್ಟರ್ ಎಕ್ಸಟ್ರ್ಯಾಕ್ಟ್ ನ ದೃಢೀಕೃತ ನಕಲನ್ನು ನಿಪಿ-16 ಮತ್ತು 17 ಎಂದು ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ರಿಂದ 3(ಎ), 6(ಎ), 9(ಎ), 16(ಎ) ಮತ್ತು 17(ಎ) ಎಂದು ಗುರುತಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**14.** ಆರೋಪಿ ಪರ ವಕೀಲರು ಫ್ರಾಸಾ.1 ರವರನ್ನು ಪಾಟೀ ಸವಾಲು ಮಾಡಿರುತ್ತಾರೆ. ಫ್ರಾಸಾ.1 ರವರು ತಮ್ಮ ಪಾಟೀ ಸವಾಲಿನಲ್ಲಿ, ನಾನು ಬೆಳ್ತಂಗಡಿಯ ಮುಮ್ತಾಜ್ ವಕೀಲರಿಂದ ದಿ.17.09.2018 ರಂದು ಆರೋಪಿಗೆ ನೋಟೀಸು ಕೊಡಿಸಿದ್ದೆ ಎಂದರೆ ಸರಿ. ಈಗ ನೋಡುತ್ತಿರುವ ನೋಟೀಸು ಅದೇ ಎಂದರೆ ಸರಿ. ಸದರಿ ನೋಟೀಸನ್ನು ನಿಡಿ-1 ಎಂದು ಗುರುತಿಸಲಾಯಿತು. ಆ ನೋಟೀಸನ್ನು ಕೊಡಿಸುವ ಮೊದಲು ನಾನು ಆರೋಪಿಯ ಮನೆಗೆ ಬಂದಿದ್ದೆ. ನಾನು 2012 ನೇ ಇಸವಿಯಿಂದ ಆರೋಪಿಯ ಮನೆಗೆ ಇಲ್ಲಿಯವರೆಗೂ ಹೋಗಿಲ್ಲ. ನನ್ನ ಚಿನ್ನವನ್ನು ಕಿತ್ತುಕೊಂಡು ನನಗೆ ಬೆದರಿಕೆ ಹಾಕಿ ಹಣ ತರಬೇಕೆಂದು ಆರೋಪಿ ನನ್ನನ್ನು ಮನೆಯಿಂದ ಹೊರಗೆ ಹಾಕಿದ್ದರು ಎಂದು ಮುಮ್ತಾಜ್ ವಕೀಲರಿಗೆ ತಿಳಿಸಿದ್ದೆ. ಈ ವಿಚಾರ ನಿಡಿ-1 ರ ನೋಟೀಸ್ ನಲ್ಲಿ ಇಲ್ಲ ಎಂದರೆ ಸರಿ. ಆರೋಪಿ ಕಿತ್ತುಕೊಂಡ ಚಿನ್ನವನ್ನು ನನ್ನ ತಂದೆ ಖರೀದಿಸಿದ್ದರು. ಅದಕ್ಕೆ ಸಂಬಂಧಪಟ್ಟ ರಶೀದಿಗಳನ್ನು ಪೋಲಿಸರಿಗೆ ನಾನು ಕೊಟ್ಟಿಲ್ಲ. ಆರೋಪಿಯು ನನ್ನ ಚಿನ್ನಗಳನ್ನು ಕಿತ್ತುಕೊಂಡಿಲ್ಲ ಹಾಗೂ

ಹಣ ತರುವಂತೆ ಬೇಡಿಕೆ ಇಟ್ಟಿಲ್ಲ ಎಂದರೆ ಸರಿಯಲ್ಲ. 2012 ನೇ ಇಸವಿಯ ನಂತರ ಆರೋಪಿ ನಮ್ಮ ಊರಿಗೆ ಬಂದು ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ.

**15.** ಮುಂದುವರೆದ ಪಾಟೀಸವಾಲಿನಲ್ಲಿ, ನಾನು ಆರೋಪಿಯೊಂದಿಗೆ ವಾಸಿಸುವಾಗ ಅವರು ನನಗೆ ಎಂದಿಗೂ ಸಹಾ ಮಾನಸಿಕ ಹಾಗೂ ದೈಹಿಕ ಹಿಂಸೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನಾನು ಆರೋಪಿಯ ವಿರುದ್ಧ ಪೋಲಿಸರಿಗೆ ದೂರು ಕೊಟ್ಟಿಲ್ಲ. ನಾನು ಮೂಡಿಗೆರೆ ಬಾಪುನಗರದಲ್ಲಿ ಇರುವ ಮೊಹಿದ್ದೀನ್ ಜುಮ್ಮಾ ಮಸೀದಿಗೆ ನನ್ನ ಹಾಗೂ ಆರೋಪಿಯ ನಡುವೆ ಪಂಚಾಯಿತಿ ಮಾಡುವಂತೆ ಮನವಿ ಪತ್ರ ಕೊಟ್ಟಿದ್ದೆ. ಈ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿ.14.06.2018 ರಂದು ನಾನು ಆಸ್ಪತ್ರೆಗೆ ದಾಖಲಾಗಿ ಆ ದಿನ ಸಂಜೆಯವರೆಗೂ ಆಸ್ಪತ್ರೆಯಲ್ಲಿಯೇ ಇದ್ದೆ. ಸದರಿ ಕೃತ್ಯದ ಸಂಬಂಧ ನಾನು ಆರೋಪಿಯ ವಿರುದ್ಧ ಪೋಲಿಸ್ ಠಾಣೆಗೆ ದೂರು ಕೊಟ್ಟಿದ್ದೆ. ಆ ದೂರಿನನ್ವಯ ಪೋಲಿಸರು ಆರೋಪಿಯನ್ನು ಠಾಣೆಗೆ ಬರುವಂತೆ ಕರೆದರೂ ಸಹಾ ಅವರು ಬರಲಿಲ್ಲ. ನಾನು ಹೇಳಿರುವಂತೆ ದಿ.13.06.2018 ರಂದು ಆರೋಪಿ ನನಗೆ ಹಲ್ಲೆ ಮಾಡಿಲ್ಲದೇ ಇದ್ದರೂ ಸಹಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಗೆ ದಾಖಲಾದ ಬಗ್ಗೆ ನಾನು ಪೋಲಿಸರಿಗೆ ದಾಖಲೆಯನ್ನು ಕೊಟ್ಟಿದ್ದೆ.

**16.** ಮುಂದುವರೆದ ಪಾಟೀಸವಾಲಿನಲ್ಲಿ, ಆರೋಪಿಯು ಮತ್ತೊಂದು ಮದುವೆಯಾಗಿರುವ ಬಗ್ಗೆ ಮಹಿಳಾ ಸಾಂತ್ವಾನ ಕೇಂದ್ರದಲ್ಲಿ ಒಪ್ಪಿಕೊಂಡಿದ್ದಾರೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಆರೋಪಿಯು ಮತ್ತೊಂದು ಮದುವೆಯಾದ ವ್ಯಕ್ತಿಯ ಹೆಸರು ನನಗೆ ಗೊತ್ತಿಲ್ಲದ ಕಾರಣ ಅವರ ಹೆಸರನ್ನು ದೂರಿನಲ್ಲಿ ನಮೂದಿಸಿಲ್ಲ. ನಾನು ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ದೂರು ಕೊಡುವ ಮುನ್ನ ಬೆಳ್ತಂಗಡಿ ನ್ಯಾಯಾಲಯದಲ್ಲಿ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ದೂರು ಕೊಟ್ಟ ನಂತರ ಅರ್ಜಿ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ತಿಳಿಸಿರುವ ಅಂಶಗಳನ್ನು ಸದರಿ ಜೀವನಾಂಶದ ಅರ್ಜಿಯಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. ನಾನು ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ಕೇವಲ ಒಂದು ಬಾರಿ ದೂರು

ಕೊಟ್ಟಿದ್ದೇನೆ. ದಿ.29.08.2018 ರಂದು ನಾನು ಮೂಡಿಗೆರೆ ಪೋಲಿಸ್ ಠಾಣೆಗೆ ದೂರು ಕೊಟ್ಟಿದ್ದೇನೆ. ಸದರಿ ಪೋಲಿಸ್ ಠಾಣೆಗೆ ದಿ.01.08.2018 ರಂದು ದೂರು ಕೊಟ್ಟಿದ್ದು, ಅದನ್ನು ಕೌನ್ಸಿಲಿಂಗ್ ಗೆಂದು ಚಿಕ್ಕಮಗಳೂರಿಗೆ ಕಳುಹಿಸಿಕೊಟ್ಟಿದ್ದರು. ನನ್ನ ಎರಡು ದೂರುಗಳನ್ನು ನನ್ನ ಅಣ್ಣ ಬರೆದುಕೊಟ್ಟರು. ದೂರುಗಳಿಗೆ ನನ್ನ ಅಣ್ಣ ಸಹಿ ಮಾಡಿದ್ದಾರೆ.

**17.** ಮುಂದುವರೆದ ಪಾಟೀಸವಾಲಿನಲ್ಲಿ, ನಾನು ಹೇಳಿದಂತೆ ಪೋಲಿಸರು ಯಾವ ಸ್ಥಳಕ್ಕೂ ಬಂದಿಲ್ಲ ಹಾಗೂ ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಪೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಪೋಲಿಸರು ನನ್ನ ಮರುಹೇಳಿಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಪೋಲಿಸರೊಂದಿಗೆ ಆರೋಪಿಯ ಮನೆಯ ಬಳಿ ಹೋದಾಗ ಒಬ್ಬ ಹೆಂಗಸು ನನ್ನನ್ನು ನೋಡಿ ಆರೋಪಿಯ ಮನೆಯ ಒಳಗೆ ಹೋದದ್ದನ್ನು ನೋಡಿದ್ದೆ. ಪೋಲಿಸರು ನನ್ನ ಸಮಕ್ಷಮ ಸದರಿ ಮಹಿಳೆಯನ್ನು ವಿಚಾರಣೆ ಮಾಡಿಲ್ಲ. ನಾನು ಆರೋಪಿಯನ್ನು ಮದುವೆಯಾಗುವ ಕಾಲಕ್ಕೆ ಅವರ ತಾಯಿಗೆ 60 ವರ್ಷ ಮೇಲಾಗಿತ್ತು ಎಂದರೆ ಸಾಕ್ಷಿಯು 58 ವರ್ಷ ಎಂದು ನುಡಿಯುತ್ತಾರೆ. ಆರೋಪಿಯು ನನ್ನೊಂದಿಗೆ ಪುಂಜಲಕಟ್ಟೆಯಲ್ಲಿ ಪ್ರತ್ಯೇಕವಾಗಿ ವಾಸಿಸುವಂತೆ ಆರೋಪಿಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಆರೋಪಿಯು ಒಪ್ಪದಿದ್ದಾಗ ನಾನು ಅಲ್ಲಿನ ಮಸೀದಿಗೆ ದೂರು ಕೊಟ್ಟಿದ್ದೆ ಎಂದರೆ ಸರಿಯಲ್ಲ. ನನ್ನನ್ನು ಗಂಡನ ಮನೆಗೆ ಕಳುಹಿಸಿಕೊಡಿ ಎಂದು ನಾನು ಪುಂಜಲಕಟ್ಟೆ ಮಸೀದಿಗೆ ದೂರು ಕೊಟ್ಟಿದ್ದೆ. ಆರೋಪಿಯನ್ನು ಸದರಿ ಮಸೀದಿಗೆ ಕರೆಯಿಸಿ ನಾನು ಮತ್ತು ನನ್ನ ಕುಟುಂಬದವರು ಹಲ್ಲೆ ಮಾಡಿದ್ದೇವೆ ಎಂದರೆ ಸರಿಯಲ್ಲ.

**18.** ಮುಂದುವರೆದ ಪಾಟೀಸವಾಲಿನಲ್ಲಿ, ಆರೋಪಿಯು ನನ್ನೊಂದಿಗೆ ಪ್ರತ್ಯೇಕ ಮನೆಯಲ್ಲಿ ಇರಲು ಒಪ್ಪದಿದ್ದಾಗ ನಾನು ಅವರನ್ನು ಬಿಟ್ಟು ನನ್ನ ತಾಯಿಯ ಮನೆಗೆ ಹೋಗಿದ್ದೆ ಎಂದರೆ ಸರಿಯಲ್ಲ. 2011 ನೇ ಇಸವಿಯಿಂದ ಇಲ್ಲಿಯವರೆಗೂ ಆರೋಪಿಯು ನನ್ನನ್ನು ವಾಪಸ್ಸು ಕರೆಯುತ್ತಿದ್ದರು ನಾನು ಒಪ್ಪುತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಇಂದಿಗೂ ಸಹಾ ನನ್ನೊಂದಿಗೆ ಸಂಸಾರ ಮಾಡಲು ತಯಾರಿದ್ದಾರೆ ಎಂದರೆ ಸಾಕ್ಷಿಯು

ಅವರು ಮದುವೆಯಾಗಿರುವ ಮತ್ತೊಬ್ಬ ಮಹಿಳೆಯನ್ನು ಮನೆಯಿಂದ ಕಳುಹಿಸಿದರೆ ನಾನು ಹೋಗತ್ತೇನೆ ಎಂದು ನುಡಿಯುತ್ತಾರೆ. ನಾನು ಹೇಳಿದಂತೆ ಆರೋಪಿಯು ಮತ್ತೊಂದು ವಿವಾಹವಾಗಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಹಾಗೂ ಅವರನ್ನು ನನ್ನ ತಾಯಿಯ ಮನೆಗೆ ಕರೆಸಿಕೊಳ್ಳುವ ಉದ್ದೇಶದಿಂದ ಸುಳ್ಳು ದೂರನ್ನು ಕೊಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಗುರುತಿಸಿರುವ ಎಲ್ಲಾ ದಾಖಲೆಗಳನ್ನು ಪೋಲಿಸರೊಂದಿಗೆ ಸೇರಿ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ.

**19.** ಇನ್ನೂ ಚಾಸಾ.2 ಅಬ್ದುಲ್ ರವರನ್ನು ಪ್ರಾಸಾ.2 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ, ನ್ಯಾಯಾಲಯದ ಮುಂದಿರುವ ಆರೋಪಿಯು ನನ್ನ ತಂಗಿಯ ಗಂಡ. ಚಾಸಾ-1 ನನ್ನ ತಂಗಿ. ಚಾಸಾ-3 ನನ್ನ ತಾಯಿ. ಚಾಸಾ-4 ನನ್ನ ಅಕ್ಕ. ಚಾಸಾ-5 ಮತ್ತು 6 ನನ್ನ ತಮ್ಮಂದಿರು. ಚಾಸಾ-7 ನನ್ನ ಭಾವ. ಚಾಸಾ-8 ರಿಂದ 12 ರವರ ಪರಿಚಯ ನನಗಿದೆ. ದಿ.21.08.2008 ರಂದು ಪುಂಜಾಲಕಟ್ಟೆಯ ಬದ್ರಿಯಾ ಜುಮ್ಮಾ ಮಸೀದಿಯಲ್ಲಿ ಚಾಸಾ-1 ಮತ್ತು ಆರೋಪಿಯ ಮದುವೆಯಾಗಿದೆ. ಆರೋಪಿಯ ಬೇಡಿಕೆಯಂತೆ ಮದುವೆ ಸಮಯಕ್ಕೆ ಅವರಿಗೆ ರೂ.3 ಲಕ್ಷ ಹಣ, ರೂ.15,000/- ವಾಚ್, ಒಂದು ಜೊತೆ ಸೂಟ್ ನ್ನು ವರದಕ್ಷಿಣೆಯಾಗಿ ಪಡೆದಿದ್ದಾರೆ. ಮುಂದುವರೆದು ಆರೋಪಿಯ ಮಾತಿನಂತೆ ಚಾಸಾ-1 ರವರಿಗೆ 80 ಗ್ರಾಂ ಚಿನ್ನದ ನೆಕ್ಲೇಸ್, 25 ಗ್ರಾಂ ನ ಮತ್ತೊಂದು ಚಿನ್ನದ ನೆಕ್ಲೇಸ್, 64 ಗ್ರಾಂ ನ ಚಿನ್ನದ ಸೊಂಟಪಟ್ಟಿ, 56 ಗ್ರಾಂ 4 ಚಿನ್ನದ ಬಳೆಗಳು, 14 ಗ್ರಾಂ ನ ಒಂದು ಜೊತೆ ಚಿನ್ನದ ಓಲೆ. ಹೀಟೆ ಒಟ್ಟು ಸುಮಾರು ಸುಮಾರು 240 ಗ್ರಾಂ ಚಿನ್ನವನ್ನು ಹಾಕಿದ್ದೆವು. ಮದುವೆ ಕಾಲಕ್ಕೆ ಊಟಉಪಚಾರದ ಖರ್ಚು ರೂ.63,000/- ಹಣವನ್ನು ನಾವೇ ಬರಿಸಿದ್ದೇವೆ. ಮದುವೆ ನಂತರ ಚಾಸಾ-1 ರವರು ಆರೋಪಿಯೊಂದಿಗೆ ಅವರ ಮನೆಯಲ್ಲಿ ವಾಸಿಸುತ್ತಿದ್ದರು. 20 ದಿನಗಳ ಕಾಲ ಅನ್ಯೂನ್ಯವಾಗಿದ್ದರು. ಆನಂತರ ಆರೋಪಿ ಆಟೋ ಖರೀದಿಸುವ ಕಾರಣಕ್ಕಾಗಿ ರೂ.1 ಲಕ್ಷ ಹಣವನ್ನು ಬೇಡಿಕೆ ಇಟ್ಟರು. ಈ ವಿಚಾರವನ್ನು ಚಾಸಾ-1 ರವರು ನಮಗೆ ತಿಳಿಸಿದ್ದರು. ನಮಗೆ ಸಾಲ ಇದ್ದ ಕಾರಣ ಆರೋಪಿಗೆ ಹಣ ಕೊಡಲಾಗಿಲ್ಲ. ಈ

ಕಾರಣ ಆರೋಪಿ ಚಾಸಾ-1 ರವರಿಗೆ ವರದಕ್ಷಿಣೆ ಕಿರುಕುಳ ಕೊಡಲು ಪ್ರಾರಂಭಿಸಿದರು. ಈ ಕಾರಣ ಚಾಸಾ-1 ರವರು 3 ಬಾರಿ ತವರು ಮನೆಗೆ ಬಂದಿದ್ದರು. ಹಾಗೇ ತವರು ಮನೆಗೆ ಬಂದಿದ್ದಾಗ ನಾವು ಚಾಸಾ-1 ರವರಿಗೆ ಬುದ್ದಿ ಹೇಳಿ ಆರೋಪಿಯ ಮನೆಗೆ ಬಿಟ್ಟು ಬಂದಿದ್ದೆವು.

**20.** ಮುಂದುವರದು, ಆರೋಪಿಯು ಪದೇಪದೇ ಚಾಸಾ-1 ರವರಿಗೆ ಕಿರುಕುಳ ನೀಡುತ್ತಿದ್ದ ಕಾರಣ ದಿ.17.03.2011 ರಂದು ಆರೋಪಿಯು ಚಾಸಾ-1 ಮತ್ತು ಅವರ ಮಗಳನ್ನು ಹಣ ತೆಗೆದುಕೊಂಡು ಬರುವಂತೆ ಮನೆಯಿಂದ ಹೊರಗೆ ಹಾಕಿದರು. ಈ ವಿಚಾರವನ್ನು ನಮಗೆ ತಿಳಿಸಿದ್ದ ಕಾರಣ ಚಾಸಾ-6 ರವರನ್ನು ಮೂಡಿಗೆರೆಗೆ ಕಳುಹಿಸಿ ಚಾಸಾ-1 ರವರನ್ನು ವಿಚಾರಿಸುವಂತೆ ಹೇಳಿದ್ದೆವು. ಚಾಸಾ-6 ರವರು ಮೂಡಿಗೆರೆಗೆ ಬಂದಿದ್ದಾಗ ಆರೋಪಿಯು ತನಗೆ ಹಣ ಕೊಡದಿದ್ದರೆ ಚಾಸಾ-1 ಮತ್ತು ಮಗುವನ್ನು ಮನೆಗೆ ಸೇರಿಸುವುದಿಲ್ಲ ಎಂದು ಹೇಳಿದ್ದರು. ದಿ.24.12.2011 ರಂದು ಪುಂಜಾಲಕಟ್ಟೆಯ ನಂದಗೋಕುಲ ಹಾಲ್ ನಲ್ಲಿ ಎರಡು ಕಡೆಯ ಹಿರಿಯರನ್ನು ಸೇರಿಸಿ ಪಂಚಾಯಿತಿ ಮಾಡಿಸಿದ್ದೆವು. ಅಲ್ಲಿ ಚಾಸಾ-1 ರವರನ್ನು ತನ್ನೊಂದಿಗೆ ಕರೆದುಕೊಂಡು ಹೋಗಲು ಆರೋಪಿಗೆ ತಿಳಿಸಿದ್ದರೂ ಸಹಾ ಆರೋಪಿ ಕರೆದುಕೊಂಡು ಹೋಗಲಿಲ್ಲ. ದಿ.27.11.2012 ರಂದು ಪುಂಜಾಲಕಟ್ಟೆ ಮಸೀದಿಯವರು ಮೂಡಿಗೆರೆ ಬಾಬು ನಗರ ಮಸೀದಿಯವರಿಗೆ ಪತ್ರ ಬರೆದು ಆರೋಪಿ ಮತ್ತು ಚಾಸಾ-1 ರವರು ಸಮಸ್ಯೆ ಬಗೆಹರಿಸಲು ಕೇಳಿದ್ದರು. ದಿ.08.12.2012 ರಂದು ಮೂಡಿಗೆರೆ ಮಸೀದಿಯವರು ಆ ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಂಡು ಚಾಸಾ-1 ರವರನ್ನು ತನ್ನೊಂದಿಗೆ ಕರೆದುಕೊಂಡು ಬರುವಂತೆ ಆರೋಪಿಗೆ ಹೇಳಿದ್ದರು. ಆ ಸಮಯಕ್ಕೆ ಬೇರೆ ಮನೆ ಮಾಡಿ ಚಾಸಾ-1 ರವರನ್ನು ಕರೆದುಕೊಂಡು ಬರುತ್ತೇನೆ ಎಂದು ಹೇಳಿದ್ದರು. ಆದರೆ ಆ ಪ್ರಕಾರ ನಡೆದುಕೊಂಡಿಲ್ಲ. ಆನಂತರ ಆರೋಪಿಯು ಮತ್ತೊಂದು ಮದುವೆಯಾಗಿದ್ದಾರೆ ಎಂದ ನಮಗೆ ತಿಳಿದುಬಂತು.

**21.** ಮುಂದುವರದು, ದಿ.13.06.2018 ರಂದು ಆರೋಪಿಯು ನಮ್ಮ ಮನೆಗೆ ಬಂದಾಗ 2 ನೇ ಮದುವೆಯ ಬಗ್ಗೆ ಪ್ರಶ್ನಿಸಿದಾಗ ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿ ಹೋದರು. ಆ ಸಮಯಕ್ಕೆ ಚಾಸಾ-1 ರವರು ಅಸ್ವಸ್ಥರಾಗಿದ್ದ ಕಾರಣ ಅವರನ್ನು ಪುಂಜಾಲಕಟ್ಟೆಯ ಸರ್ಕಾರಿ ಆಸ್ಪತ್ರೆಗೆ ಸೇರಿಸಿ, ದಿ.14.06.2018 ರಂದು ಚಾಸಾ-1 ರವರು ಆರೋಪಿಯ ವಿರುದ್ಧ ಪುಂಜಾನಲಕಟ್ಟೆಯ ಪೋಲಿಸ್ ಠಾಣೆಗೆ ದೂರು ನೀಡಿದ್ದಾರೆ. ಸದರಿ ಪೋಲಿಸರು ಆರೋಪಿಯನ್ನು ವಿಚಾರಣೆಗೆ ಕರೆದರು ಅವರು ಬಂದಿರಲಿಲ್ಲ. ದಿ.02.07.2018 ರಂದು ಚಾಸಾ-1 ರವರು ಬೆಳ್ತಂಗಡಿಯ ಮಹಿಳಾ ಸಾಂತ್ವಾನ ಕೇಂದ್ರಕ್ಕೆ ದೂರು ಕೊಟ್ಟಿದ್ದಾರೆ. ಸದರಿರವರು ದಿ.16.07.2018 ರಂದು ಎರಡೂ ಕಡೆಯವರನ್ನು ವಿಚಾರಣೆಗೆ ಕರೆಸಿದ್ದು ಅಲ್ಲಿ ಆರೋಪಿಯು ಒಂದು ವಾರದೊಳಗೆ ನಿರ್ಧಾರ ತಿಳಿಸುತ್ತೇನೆ ಎಂದು ಹೇಳಿ ನಂತರ ಯಾವುದೇ ಪ್ರತಿಕ್ರಿಯೇ ನೀಡಿಲ್ಲ. ಈ ಕಾರಣ ದಿ.01.08.2018 ರಂದು ಚಾಸಾ-1 ರವರು ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಪೋಲಿಸರು ಇಬ್ಬರನ್ನು ವಿಚಾರಣೆ ಮಾಡಿದ್ದು ಅವರು ಯಾವುದೇ ನಿರ್ಧಾರಕ್ಕೆ ಬರದ ಕಾರಣ ಪ್ರಕರಣ ದಾಖಲಿಸಿದ್ದಾರೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

**22.** ಆರೋಪಿ ಪರ ವಕೀಲರು ಫ್ರಾಸಾ.2 ರವರನ್ನು ಪಾಟೀ ಸವಾಲು ಮಾಡಿರುತ್ತಾರೆ. ಫ್ರಾಸಾ.2 ರವರು ತಮ್ಮ ಪಾಟೀ ಸವಾಲಿನಲ್ಲಿ, 2008 ರಲ್ಲಿ ನಾವು ಆರ್ಥಿಕವಾಗಿ ಬಡತನದಲ್ಲಿ ಇದ್ದೆವು ಎಂದರೆ ಸರಿ. ಆರೋಪಿ ತನ್ನ ಖರ್ಚಿನಲ್ಲೆ ಚಾಸಾ-1 ರವರನ್ನು ವಿವಾಹವಾಗಿದ್ದಾರೆ ಎಂದರೆ ಸರಿಯಲ್ಲ. ಚಾಸಾ-1 ರವರ ವಿವಾಹ ಕಾಲಕ್ಕೆ ನನ್ನ ತಂದೆ ಸಾಲ ಪಡೆದಿದ್ದರು ಹಾಗೂ ನಮ್ಮ ಕುಟುಂಬದವರು ಸಹಾ ಸ್ವಲ್ಪ ಹಣ ಕೊಟ್ಟಿದ್ದರು. ನಾನು ಹೇಳಿರುವಂತೆ 240 ಗ್ರಾಂ ಚಿನ್ನವನ್ನು ಪುಂಜಾಲಕಟ್ಟೆಯ ಬಾಳಿಗಾ ಜ್ಯುವೆಲರ್ಸ್ ಮತ್ತು ಮಂಗಳೂರಿನ ಸುಲ್ತಾನ್ ಜ್ಯುವೆಲರ್ಸ್ ನಲ್ಲಿ ಖರೀದಿಸಿದ್ದೆವು. ಚಿನ್ನ ಖರೀದಿಸಿದ್ದ ಸಂಬಂಧ ರಶೀದಿಗಳು ನಮ್ಮ ಬಳಿ ಇದೆ. ಅವುಗಳನ್ನು ಹಾಜರುಪಡಿಸುವಂತೆ ಪೋಲಿಸರು ಕೇಳಿರಲಿಲ್ಲ. ಚಾಸಾ-1 ರವರು ದೂರು ಕೊಡುವ ಸಮಯಕ್ಕೆ ನಾನು ಅವರೊಂದಿಗೆ ಪೋಲಿಸ್ ಠಾಣೆಗೆ ಹೋಗಿದ್ದೆ. ದೂರಿನೊಂದಿಗೆ ಚಿನ್ನ ಖರೀದಿ ಸಂಬಂಧದ ರಶೀದಿಗಳನ್ನು ಪೋಲಿಸರಿಗೆ ಕೊಟ್ಟಿಲ್ಲ. 2011 ರಲ್ಲಿ ಆರೋಪಿ ಚಾಸಾ-1 ರವರಿಗೆ ಹಲ್ಲೆ ಮಾಡಿ

ತವರುಮನೆಗೆ ಕಳುಹಿಸಿದ್ದರು ಎಂದು ಹೇಳಿರುವ ಸಂಬಂಧ ಆಗ ನಾವು ಪೋಲಿಸರಿಗೆ ದೂರು ಕೊಟ್ಟಿರಲಿಲ್ಲ. 2011 ರ ನಂತರ ನಾವು ಚಾಸಾ-1 ರವರನ್ನು ಮೂಡಿಗೆರೆಯ ಆರೋಪಿಯ ಮನೆಗೆ ಕರೆದುಕೊಂಡು ಬಂದಿಲ್ಲ.

**23.** ಮುಂದುವರೆದ ಪಾಟೀಸವಾಲಿನಲ್ಲಿ, 2011 ರಿಂದಲೂ ಸಹಾ ಆರೋಪಿ ಸಾಕಷ್ಟು ಬಾರಿ ನಮ್ಮ ಮನೆಗೆ ಬಂದು ಚಾಸಾ-1 ರವರನ್ನು ಜೊತೆಗೆ ಕಳುಹಿಸಿಕೊಡುವಂತೆ ಕೇಳಿದ್ದಾರೆ ಎಂದರೆ ಸರಿಯಲ್ಲ. 2018 ರ ಜೂನ್ ತಿಂಗಳಲ್ಲಿ ಮಾತ್ರ ಆರೋಪಿ ನಮ್ಮ ಮನೆಗೆ ಬಂದಿದ್ದರು. ಆ ದಿನ ಗಲಾಟೆಯಾಯಿತು ಎಂದು ಹೇಳಿರುವ ಸಂಬಂಧ ಪುಂಜಾಲಕಟ್ಟೆ ಪೋಲಿಸ್ ಠಾಣೆಗೆ ದೂರು ಕೊಟ್ಟಿದ್ದೇವೆ. ಈ ವಿಚಾರವಾಗಿ ಪೋಲಿಸರು ಆರೋಪಿಯನ್ನು ಠಾಣೆಗೆ ಕರೆದಿದ್ದರೂ ಸಹಾ ಅವರು ಬಂದಿರಲಿಲ್ಲ. ಆರೋಪಿ ದಿ.13.06.2018 ಕ್ಕೆ ನಮ್ಮ ಮನೆಗೆ ಬಂದು ಚಾಸಾ-1 ರವರಿಗೆ ಹಲ್ಲೆ ಮಾಡಿ ವಾಪಸ್ಸು ಹೋದರು. ಪುಂಜಾಲಕಟ್ಟೆ ಪೋಲಿಸರು ನಮಗೆ ಹಿಂಬರಹ ಕೊಟ್ಟಿದ್ದಾರೆ. ಅದನ್ನು ಮೂಡಿಗೆರೆ ಪೋಲಿಸರಿಗೆ ಕೊಟ್ಟಿದ್ದೇವೆ. ದಿ.01.08.2018 ರಂದು ನಾನು ಮತ್ತು ಚಾಸಾ-1 ರವರು ಮೂಡಿಗೆರೆ ಪೋಲಿಸ್ ಠಾಣೆಗೆ ಬಂದಿದ್ದೆವು. ಆರೋಪಿ ಬೇರೊಬ್ಬರನ್ನು ಮದುವೆಯಾಗಿದ್ದಾರೆ ಎಂದು ಹೇಳಿರುವ ಸಂಬಂಧ ಅವರು ಮದುವೆಯಾಗಿರುವ ಮತ್ತೊಬ್ಬರ ಹೆಸರು ನನಗೆ ಗೊತ್ತಿಲ್ಲ. ಸದರಿ ವಿಚಾರ ನಮ್ಮ ಊರಿನವರಿಂದ ನಮಗೆ ತಿಳಿದಿತ್ತು. ಮೂಡಿಗೆರೆ ಪೋಲಿಸ್ ಠಾಣೆಗೆ ದೂರು ಕೊಡುವ 2 ತಿಂಗಳ ಹಿಂದೆಯೇ ಆರೋಪಿ ಮತ್ತೊಂದು ಮದುವೆಯಾಗಿರುವ ವಿಚಾರ ನಮಗೆ ತಿಳಿದುಬಂತು.

**24.** ಮುಂದುವರೆದ ಪಾಟೀಸವಾಲಿನಲ್ಲಿ, ದಿ.24.12.2011 ರಂದು ಆರೋಪಿ ಹಾಗೂ ನಮ್ಮ ಕುಟುಂಬದವರ ನಡುವೆ ಪಂಚಾಯಿತಿಯಾಗಿತ್ತು ಎಂದರೆ ಸರಿ. ಆ ಪಂಚಾಯಿತಿಯಲ್ಲಿ ಆರೋಪಿಯು ಪುಂಜಾಲಕಟ್ಟೆಗೆ ಬಂದು ವಾಸವಿರಬೇಕು ಎಂದು ನಾವು ಹೇಳಿದ್ದೆವು ಎಂದರೆ ಸರಿಯಲ್ಲ. ಆಗ ಆರೋಪಿ ತನಗೆ ವಯಸ್ಸಾಗಿರುವ ತಾಯಿ ಇದ್ದಾರೆ ಎಂದು ತಿರಸ್ಕರಿಸಿದ್ದರು ಎಂದರೆ ಸರಿಯಲ್ಲ. ಚಾಸಾ-1 ರವರು ಆರೋಪಿಯ ತಾಯಿಯೊಂದಿಗೆ ವಾಸವಿರಲು ಆಗುವುದಿಲ್ಲ ಎಂದು ಉದ್ದೇಶಪೂರ್ವಕವಾಗಿ ಅವರೇ

ಮನೆ ಬಿಟ್ಟು ಹೋಗಿದ್ದಾರೆ ಎಂದರೆ ಸರಿಯಲ್ಲ. ಆರೋಪಿ ಚಾಸಾ-1 ರವರನ್ನು ನನ್ನೊಂದಿಗೆ ಕಳುಹಿಸುವಂತೆ ಅನೇಕ ಬಾರಿ ಕೇಳಿದ್ದರು ಸಹಾ ನಾವೇ ಕಳುಹಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಚಾಸಾ-1 ರವರಿಗೆ ಎಂದಿಗೂ ಸಹಾ ಹಿಂಸೆ ಮತ್ತು ಹಲ್ಲೆ ಮಾಡಿ ವರದಕ್ಷಿಣೆ ಕಿರುಕುಳ ನೀಡದಿದ್ದರು ಸಹಾ ನಾನು ಅವರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಚಿನ್ನ ಮತ್ತು ಹಣ ಕೊಟ್ಟು ಮದುವೆ ಮಾಡಿದ್ದೇವು ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಆಟೋ ರಿಕ್ಷಾ ಖರೀದಿಸಲು ರೂ.1,00,000/- ಹಣ ಕೊಡುವಂತೆ ಆರೋಪಿ ಕೇಳಿದ್ದರು ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾವು ಮೂಡಿಗೆರೆ ಪೋಲಿಸ್ ಠಾಣೆಗೆ ದೂರು ಕೊಟ್ಟ ನಂತರ ಆರೋಪಿ, ಆ ಪೋಲಿಸ್ ಠಾಣೆಗೆ ಬಂದಿದ್ದರು ಎಂದರೆ ಸರಿ. ಆ ಸಂದರ್ಭದಲ್ಲೂ ಸಹಾ ಆರೋಪಿಯು ಚಾಸಾ-1 ರವರನ್ನು ತನ್ನೊದಿಂಗೆ ಕಳುಹಿಸಿಕೊಡಲು ಕೇಳಿದ್ದರು ಸಹ, ನಾವು ಸುಳ್ಳು ಕಥೆ ಸೃಷ್ಟಿಸಿ ಸುಳ್ಳು ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ಚಾಸಾ-1 ರವರೊಂದಿಗೆ ಇಂದಿಗೂ ಸಂಸಾರ ಮಾಡಲು ತಯಾರಿದ್ದಾರೆ ಎಂದರೆ ಸಾಕ್ಷಿಯು ಅವರು ಬೇರೆ ಮನೆ ಮಾಡಬೇಕು ಎಂದು ನುಡಿಯುತ್ತಾರೆ.

**25.** ಮುಂದುವರೆದ ಪಾಟೀಸವಾಲಿನಲ್ಲಿ, ಆರೋಪಿಗೆ ಸ್ವಂತ ಮನೆ ಇದ್ದು ಅಲ್ಲಿಯೇ ವಾಸವಿರಲು ಚಾಸಾ-1 ರವರನ್ನು ಕೇಳಿಕೊಂಡರು ಸಹಾ ನಾವು ತಿರಸ್ಕರಿಸಿದ್ದೆವು ಎಂದರೆ ಸರಿಯಲ್ಲ. ದಿ.01.08.2018 ರ ನಂತರ ನಾನು ಎಂದಿಗೂ ಸಹಾ ಮೂಡಿಗೆರೆ ಪೋಲಿಸ್ ಠಾಣೆಗೆ ಹೋಗಿಲ್ಲ. ದೂರು ಕೊಟ್ಟ ನಂತರ ಮೂಡಿಗೆರೆ ಪೋಲಿಸರು ನಮ್ಮ ಊರಿಗೆ ಬಂದಿದ್ದು ಯಾವ ದಿನಾಂಕ ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಆ ಸಮಯಕ್ಕೆ ಪುಂಜಾಲಕಟ್ಟೆ ಪೋಲಿಸ್ ಠಾಣೆಯಲ್ಲಿ ಆದ ತೀರ್ಮಾನದ ಬಾಬ್ತು ಯಾವುದೇ ದಾಖಲೆಯನ್ನು ಪೋಲಿಸರು ಪಡೆದುಕೊಂಡಿಲ್ಲ. ಆರೋಪಿಯಿಂದ ಯಾವುದೇ ತಪ್ಪು ಆಗದೇ ಇದ್ದರೂ ನಾನು ಸುಳ್ಳು ಆರೋಪಣೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ.

**26.** ಇನ್ನೂ ಚಾಸಾ.8 ಅನೀಫ್ ರವರನ್ನು ಫ್ರಾಸಾ.3 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿ.01.09.2018 ರಂದು ಮೂಡಿಗೆರೆ ಬಾಪುನಗರದ ಚಾಸಾ-1 ರವರ ಅತ್ತೆ ಮನೆಯಲ್ಲಿ ಪೋಲಿಸರು ಮಹಜರ್ ಬರೆದು ನಿಪಿ-4 ಮತ್ತು 5 ರ ಫೋಟೋಗಳನ್ನು ತೆಗೆದಿದ್ದಾರೆ. ಸದರಿ ಮಹಜರ್ ಕಾಲಕ್ಕೆ ಚಾಸಾ-9 ರವರು ಸಹಾ ನನ್ನೊಂದಿಗೆ ಇದ್ದು ಪೋಲಿಸರಿಗೆ ಚಾಸಾ-1 ರವರು ಸ್ಥಳ ತೋರಿಸಿದರು. ಸದರಿ ಮಹಜರ್ ನ್ನು ಬೆ.10.45 ರಿಂದ 11.45 ರವರೆಗೂ ಬರೆಯಲಾಗಿದೆ. ಅದೇದಿನ ನಮ್ಮನ್ನು ಮೂಡಿಗೆರೆ ಪೋಲಿಸ್ ಠಾಣೆಗೆ ಕರೆದುಕೊಂಡು ಬಂದು ಅಲ್ಲಿ ಚಾಸಾ-1 ರವರ ವಿವಾಹದ ಸಂಬಂಧ ಮಸೀದಿ ಪತ್ರ ಮತ್ತು ಫೋಟೋಗಳನ್ನು ನನ್ನ ಹಾಗೂ ಚಾಸಾ-9 ರವರ ಸಮಕ್ಷಮ ವಶಕ್ಕೆ ಪಡೆದುಕೊಂಡು ಮಹಜರ್ ಬರೆದು ಫೋಟೋಗಳನ್ನು ತೆಗೆದಿದ್ದಾರೆ. ದಿ.12.09.2018 ರಂದು ಮೂಡಿಗೆರೆ ಪೋಲಿಸರು ಪುಂಜಾರ್ಲಕಟ್ಟೆಯಲ್ಲಿರುವ ಚಾಸಾ-1 ರವರ ತಾಯಿಯ ಮನೆಗೆ ಬಂದು ಅಲ್ಲಿ ನನ್ನ ಹಾಗೂ ಚಾಸಾ-10 ರವರ ಸಮಕ್ಷಮ ಮಹಜರ್ ಬರೆದು ಫೋಟೋಗಳನ್ನು ತೆಗೆದಿದ್ದಾರೆ. ಸದರಿ ಮಹಜರ್ ಕಾಲಕ್ಕೆ ಚಾಸಾ-1 ರವರು ಸ್ಥಳ ತೋರಿಸಿದ್ದು, ಆ ಮಹಜರ್ ನ್ನು ಮ.12.30 ರಿಂದ 1.15 ರ ಸಮಯದವರೆಗೂ ಬರೆಯಲಾಗಿದೆ. ಸಾಕ್ಷಿಯು ನಿಪಿ-12 ಮತ್ತು 13 ರ ಫೋಟೋಗಳನ್ನು ನೋಡಿ ಚಾಸಾ-1 ರವರಿಂದ ಪೋಲಿಸರು ವಶಕ್ಕೆ ಪಡೆದ ಫೋಟೋಗಳನ್ನು ಇವೆ ಎಂದು ಗುರುತಿರುವುದಾಗಿ ಸಾಕ್ಷ್ಯನುಡಿದಿರುತ್ತಾರೆ.

**27.** ಆರೋಪಿ ಪರ ವಕೀಲರು ಫ್ರಾಸಾ.3 ರವರನ್ನು ಪಾಟೀ ಸವಾಲು ಮಾಡಿರುತ್ತಾರೆ. ಫ್ರಾಸಾ.3 ರವರು ತಮ್ಮ ಪಾಟೀ ಸವಾಲಿನಲ್ಲಿ, ಚಾಸಾ-1 ರವರು ಪುಂಜಾರ್ಲಕಟ್ಟೆಯ ನನ್ನ ಮನೆಯ ಪಕ್ಕದ ಮನೆ ವಾಸಿ. ಈ ದಿನ ಚಾಸಾ-1 ರವರೇ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿ. ನಿಪಿ-3 ರಲ್ಲಿ ನನ್ನ ಸಹಿ ಪಡೆಯುವ ದಿನಾಂಕದಂದೇ ನಾನು ಬಣಕಲ್ ನ ಚಕಮಕ್ಕಿ ಗ್ರಾಮಕ್ಕೆ ಬಂದಿದ್ದೆ. ಆ ದಿನ ಬೆ.10.00 ಗಂಟೆಗೆ ಚಕಮಕ್ಕಿಗೆ ಬಂದಿದ್ದೆ. ಆ ದಿನ ಚಕಮಕ್ಕಿಯಲ್ಲಿ ಅರ್ಧ ಗಂಟೆಗಳ ಕಾಲ ಇದ್ದೆ. ಆ ದಿನ ಮಹಜರ್ ಸಾಕ್ಷಿಯಾಗಿ ಬರುವಂತೆ ಚಾಸಾ-1 ರವರೇ ನನ್ನನ್ನು ಕರೆದಿದ್ದರು. ಆ ದಿನ ನಾನು ನೇರವಾಗಿ ಪೋಲಿಸ್ ಠಾಣೆಗೆ ಹೋಗಿದ್ದೆ. ಆ ತಕ್ಷಣವೇ ಪೋಲಿಸರು ನನ್ನನ್ನು ಸ್ಥಳಕ್ಕೆ ಕರೆದಕೊಂಡು ಹೊರಟರು. ನಾನು ಪೋಲಿಸ್ ಠಾಣೆಗೆ ಹೋಗಿದ್ದಾಗ ಅಲ್ಲಿ

ಪೋಲಿಸರು ನನ್ನಿಂದ ಮೂರು ಸಹಿಗಳನ್ನು ಪಡೆದಿದ್ದರು. ಆ ರೀತಿ ಸಹಿ ಮಾಡಿದ ದಾಖಲೆಗಳಲ್ಲಿ ಏನು ಬರೆದಿತ್ತು ಎಂದು ನಾನು ಓದಿ ನೋಡಿಲ್ಲ. ನಾನು ಪೋಲಿಸ್ ಠಾಣೆಗೆ ಹೋಗುವ ಮುನ್ನ ಚಾಸಾ-9 ರವರು ಠಾಣೆಯಲ್ಲಿಯೇ ಇದ್ದರು. ನಾನು ಸಹಿ ಮಾಡುವ ಮುನ್ನ ಚಾಸಾ-9 ರವರು ಸಹಿಗಳನ್ನು ಮಾಡಿದ್ದರ ಎಂದು ನನಗೆ ಗೊತ್ತಿಲ್ಲ. ಆ ದಿನ ಪೋಲಿಸರು ನಮ್ಮನ್ನು ಬಾಪುನಗರಕ್ಕೆ ಕರೆದುಕೊಂಡು ಹೋಗಿದ್ದರು.

**28.** ಮುಂದುವರೆದ ಪಾಟೀಸವಾಲಿನಲ್ಲಿ, ನಾನು ಹೇಳಿದಂತೆ ಪೋಲಿಸರು ಮತ್ತು ಚಾಸಾ-1 ರವರೊಂದಿಗೆ ಬಾಪುನಗರಕ್ಕೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ಆ ದಿನ ಚಾಸಾ-1 ರವರ ಅತ್ತೆ ಮನೆಯಲ್ಲಿಯೇ ಇದ್ದರು. ಸದರಿರವರನ್ನು ನಿಲ್ಲಿಸಿ ಫೋಟೋ ತೆಗೆಯಲಾಗಿದೆಯಾ ಎಂದು ನನಗೆ ಗೊತ್ತಿಲ್ಲ. ನಾನು ಹೇಳಿದಂತೆ ಯಾವುದೇ ಸ್ಥಳಗಳಲ್ಲಿ ಮಹಜರ್ ಕ್ರಮ ಜರುಗಿಸದೇ ಇದ್ದರು ಮೇಲೆ ಗುರುತಿಸಿರುವ ಮಹಜರ್ ಗಳಿಗೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿ ಫೋಟೋಗಳನ್ನು ಚಾಸಾ-1 ರವರೊಂದಿಗೆ ಸೇರಿಕೊಂಡು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ಪುಂಜಾರ್ಲಕಟ್ಟೆಗೆ ಬಂದಿದ್ದರು ಎಂದು ಹೇಳಲಾದ ದಿನ ನಾನು ಪುನಃ ಮೂಡಿಗೆರೆಗೆ ಬಂದಿಲ್ಲ. ನಾನು ಹೇಳಿದಂತೆ ಮೂಡಿಗೆರೆ ಪೋಲಿಸರು ಪುಂಜಾರ್ಲಕಟ್ಟೆಗೆ ಬಂದಿರಲಿಲ್ಲ ಹಾಗೂ ಅಲ್ಲಿ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ ಎಂದು ಉತ್ತರಿಸಿರುತ್ತಾರೆ.

**29.** ತನಿಖಾಧಿಕಾರಿಯಾದ ಚಾಸಾ.17 ರಾಮಚಂದ್ರ.ವೈ.ಪಿ ರವರನ್ನು ಫ್ರಾಸಾ.4 ರಂತೆ ಮತ್ತು ಚಾಸಾ.18 ಎಂ.ಜಗಧೀಶ್ ರವರನ್ನು ಫ್ರಾಸಾ.5 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಿದ್ದು, ಈ ಸಾಕ್ಷಿಗಳು ತಮ್ಮ ಮುಖ್ಯ ವಿಚಾರಣೆಯಲ್ಲಿ, ತಾವು ಕೈಗೊಂಡ ತನಿಖಾ ಕ್ರಮಗಳ ಬಗ್ಗೆ ಸಂಕ್ಷಿಪ್ತವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಆರೋಪಿ ಪರ ವಕೀಲರು ಫ್ರಾಸಾ.4 ಮತ್ತು 5 ರವರನ್ನು ಪಾಟೀ ಸವಾಲು ಮಾಡಿರುತ್ತಾರೆ.

**30.** ಒಟ್ಟಾರೆಯಾಗಿ ಮಾನ್ಯ ಅಭಿಯೋಜನೆಯು ಹಾಜರುಪಡಿಸಿದ ಸಾಕ್ಷ್ಯಧಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಈ ಪ್ರಕರಣದ ದೂರುದಾರರಾದ ಫ್ರಾಸಾ.1 ಹಾಗೂ ಆರೋಪಿಯವರು ದಿನಾಂಕ 21.08.2008 ರಂದು ಮದುವೆಯಾಗಿರುವುದು ಖಚಿತಪಟ್ಟಿರುತ್ತದೆ. ಫ್ರಾಸಾ2 ರವರು ಫ್ರಾಸಾ1 ರವರ ಅಣ್ಣ ಆಗಿರುತ್ತಾರೆ ಮತ್ತು ಫ್ರಾಸಾ3 ರವರು ಫ್ರಾಸಾ1 ರವರ ಪುಂಜಾಲಕಟ್ಟೆಯ ಮನೆಯ ಪಕ್ಕದ ಮನೆಯವರಾಗಿರುತ್ತಾರೆ. ಇನ್ನೂ ಚಾಸಾ4 ಮತ್ತು 5 ರವರು ಪೊಲೀಸ್ ಇಲಾಖೆಯ ತನಿಖಾಧಿಕಾರಿ ಮತ್ತು ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಿರುವ ಸಾಕ್ಷಿದಾರಾಗಿರುತ್ತಾರೆ.

**31.** ಫ್ರಾಸಾ1 ರವರು ತಮ್ಮ ಪಾಟೀಸವಾಲಿನಲ್ಲಿ 2011 ರಿಂದ ಆರೋಪಿಯ ಮನೆಯಲ್ಲೇ ತಾನು ವಾಸ ಇರುವುದಿಲ್ಲವೆಂದು ಒಪ್ಪಿರುತ್ತಾರೆ ಮತ್ತು ಆ ಸಂದರ್ಭದಲ್ಲಿ ಗಲಾಟೆಯಾಗಿರುವ ಬಗ್ಗೆ ಅದಕ್ಕೆ ಚಿಕಿತ್ಸೆ ಪಡೆದಿರುವ ಬಗ್ಗೆ ಆಸ್ಪತ್ರೆ ದಾಖಲೆಗಳನ್ನು ಕೊಟ್ಟಿದ್ದೇನೆ ಎಂದು ನುಡಿದಿರುತ್ತಾರೆ. ಆದರೆ ನ್ಯಾಯಾಲಯದ ಮುಂದೆ ಅಂತಹ ಯಾವುದೇ ದಾಖಲೆಗಳನ್ನು ಅಭಿಯೋಜನೆಯವರು ಹಾಜರುಪಡಿಸಿರುವುದಿಲ್ಲ.

**32.** ವರದಕ್ಷಿಣೆಗೆ ಸಂಬಂಧಪಟ್ಟಂತೆ ಫ್ರಾಸಾ1 ಮತ್ತು 2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅಭಿಯೋಜನೆಯ ವಾದವನ್ನು ಬೆಂಬಲಿಸಿದರೂ ಸಹ, ಅದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಅಭಿಯೋಜನೆಯು ಹಾಜರುಪಡಿಸುವಲ್ಲಿ ವಿಫಲವಾಗಿದೆ. ನ್ಯಾಯಾಲಯದ ಮುಂದೆ ಇರುವ ಅಭಿಯೋಜನೆಯ ದಾಖಲೆಗಳಾದ ನಿಪಿ.18 ರಿಂದ 21, 23 ಮತ್ತು 25 ದಾಖಲೆಗಳು ಈ ಆರೋಪಿತ ಪ್ರಕರಣ ಆದ ದಿನಾಂಕ 13.06.2018 ರ ನಂತರ ದಾಖಲಾಗಿರುವ ದಾಖಲೆಗಳಾಗಿರುತ್ತವೆ.

**33.** ಫ್ರಾಸಾ1 ಮತ್ತು 2 ರವರು ತಮ್ಮ ಪಾಟೀಸವಾಲಿನಲ್ಲಿ ಒಪ್ಪಿಕೊಂಡಿರುವಂತೆ ಫ್ರಾಸಾ1 ರವರು ಆರೋಪಿಯ ಮನೆಯಿಂದ 2011 ರಲ್ಲಿ ಬಂದ ನಂತರ ಪುನಃ ಆರೋಪಿಯ ಮನೆಗೆ ಫ್ರಾಸಾ1 ರವರು ಹಿಂದಿರುಗದಿರುವುದು ಕಂಡುಬಂದಿರುತ್ತದೆ ಮತ್ತು

2011 ರಿಂದ 2018 ರವರೆಗೂ ಯಾವುದೇ ದೂರು ಸಹ ಯಾವುದೇ ಪೊಲೀಸ್ ಠಾಣೆಯ ಮುಂದೆ ದಾಖಲಾಗಿರುವುದಿಲ್ಲ ಮತ್ತು ಹಲ್ಲೆಯ ಬಗ್ಗೆ ಯಾವುದೇ ಚಿಕಿತ್ಸೆ ಪಡೆದಿರುವ ದಾಖಲಾತಿಗಳೂ ಸಹ ನ್ಯಾಯಾಲಯದ ಮುಂದೆ ಕಂಡುಬಂದಿರುವುದಿಲ್ಲ.

**34.** ಈ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಆರೋಪಿಗೆ ವಯೋವೃದ್ಧ ತಾಯಿ ಇದ್ದು, ಫ್ರಾಸಾ1 ರವರು ಆರೋಪಿಯನ್ನು ಬೇರೆ ಮನೆ ಮಾಡಲು ಒತ್ತಾಯಿಸುತ್ತಿರುವ ಅನುಮಾನ ಫ್ರಾಸಾ2 ರವರ ಪಾಟೀಸವಾಲಿನಲ್ಲಿ ಕಂಡುಬಂದಿರುತ್ತದೆ. ಆರೋಪಿಯು ಬೇರೆ ಮದುವೆಯಾಗಿರುವ ಬಗ್ಗೆ ಫ್ರಾಸಾ1 ಮತ್ತು 2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದರೂ ಸಹ ಅವರು ಯಾರೆಂದು ಹೆಸರನ್ನು ಹೇಳಿರುವುದಿಲ್ಲ ಮತ್ತು ಅದಕ್ಕೆ ಸಂಬಂಧಪಟ್ಟ ಸಾಕ್ಷ್ಯಾಧಾರಗಳನ್ನೂ ಸಹ ಅಭಿಯೋಜನೆಯವರು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ ಮತ್ತು ವರದಕ್ಷಿಣೆ ಕೊಟ್ಟಿರುವ ಬಗ್ಗೆ ದಾಖಲಾತಿಗಳು ಇವೆ ಎಂದು ಫ್ರಾಸಾ2 ರವರು ಹೇಳಿದರೂ ಸಹ ಸದರಿ ದಾಖಲೆಗಳನ್ನು ಅಭಿಯೋಜನೆಯವರು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಇನ್ನೂ ಮಸೀದಿಯಲ್ಲಿ ಆದ ಪಂಚಾಯತಿಗೆ ಸಂಬಂಧಪಟ್ಟಂತೆ ಯಾವುದೇ ಸಾಕ್ಷಿದಾರರು ನ್ಯಾಯಾಲಯದ ಮುಂದೆ ಬಂದು ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಬಹುಮುಖ್ಯವಾಗಿ ಆರೋಪಿತ ಘಟನೆಯು ದಿನಾಂಕ 13.06.2018 ರಂದು ಫ್ರಾಸಾ1 ರವರು ತವರುಮನೆಯಾದ ಬೆಳ್ತಂಗಡಿ ತಾಲ್ಲೂಕಿನ ಪುಂಜಾಲಕಟ್ಟೆ ಯಲ್ಲಿ ನಡೆದಿರುವುದು ದೂರಿನಲ್ಲಿ ತಿಳಿಸಿರುವಂತೆ ಸಾಬೀತಾಗಿರುತ್ತದೆ. ಆದರೆ ಸದರಿ ವ್ಯಾಪ್ತಿಯಲ್ಲಿ ಯಾವುದೇ ಪ್ರಕರಣ ದಾಖಲಾಗದಿರುವುದು ಮತ್ತು ದೂರನ್ನು ಸುಮಾರು 2 ತಿಂಗಳ ನಂತರ ಮೂಡಿಗೆರೆ ಪೊಲೀಸ್ ಠಾಣೆಯಲ್ಲಿ ದಾಖಲೆ ಮಾಡಿರುವುದೂ ಸಹ ಮತ್ತು ಅದಕ್ಕೆ ಸೂಕ್ತವಾದ ಕಾರಣವನ್ನು ನೀಡದಿರುವುದು ಅಭಿಯೋಜನೆಯ ವಾದವನ್ನು ಅನುಮಾನದಿಂದ ನೋಡುವಂತೆ ಮಾಡಿರುವುದು ಕಂಡುಬಂದಿರುತ್ತದೆ.

**35.** ಫ್ರಾಸಾ1 ರಿಂದ 3 ರವರನ್ನು ಹೊರತುಪಡಿಸಿ ಬೇರೆ ಯಾವ ಸ್ವತಂತ್ರ ಸಾಕ್ಷಿಗಳು ಸಹ ನ್ಯಾಯಾಲಯದ ಮುಂದೆ ಅಭಿಯೋಜನೆಯ ವಾದವನ್ನು ಪುಷ್ಟೀಕರಿಸಿರುವುದಿಲ್ಲ.

ಫ್ರಾಸಾ1 ರಿಂದ 3 ರವರು ಹಿತಾಸಕ್ತಿ ಇರುವ ಸಾಕ್ಷಿದಾರರಾಗಿರುವ ಸಂದರ್ಭಗಳು ಈ ಪ್ರಕರಣದಲ್ಲಿ ಮೇಲ್ನೋಟಕ್ಕೆ ಕಂಡುಬರುತ್ತಿದ್ದು ಅಭಿಯೋಜನೆಯ ಪ್ರಕರಣವನ್ನು ಅನುಮಾನದಿಂದ ನೋಡುವ ಸಂದರ್ಭಗಳು ಹೆಚ್ಚಾಗಿವೆ. ಆದ್ದರಿಂದ ಕೇವಲ ಫ್ರಾಸಾ1 ರಿಂದ 3 ಅಭಿಯೋಜನೆಯ ಸಾಕ್ಷಿದಾರರುಗಳ ಸಾಕ್ಷ್ಯದ ಮೇಲೆ ಆರೋಪಿಪಿಯು ಅಭಿಯೋಜನೆಯು ಆರೋಪಿಸಿರುವಂತಹ ಅಪರಾಧವನ್ನು ಮಾಡಿದ್ದಾರೆ ಎಂದು ತೀರ್ಮಾನಕ್ಕೆ ಬರುವುದು ಸೂಕ್ತವಲ್ಲವೆಂದು ಈ ನ್ಯಾಯಾಲಯದ ಅಭಿಪ್ರಾಯ.

**36.** ಫ್ರಾಸಾ4 ಮತ್ತು 5 ರವರು ತನಿಖೆಯಲ್ಲಿ ಭಾಗವಹಿಸಿದಂತಹ ಸಾಕ್ಷಿದಾರರುಗಳಾಗಿದ್ದು, ಅವರುಗಳು ಅಭಿಯೋಜನೆಯ ವಾದಕ್ಕೆ ಪೂರಕವಾದ ಸಾಕ್ಷ್ಯವನ್ನು ನುಡಿದಿದ್ದರೂ ಸಹ ಮೇಲೆ ಹೇಳಿದಂತೆ ಫ್ರಾಸಾ1 ರಿಂದ 3 ರವರುಗಳು ಹೇಳಿರುವ ಸಾಕ್ಷ್ಯದಲ್ಲಿ ಧ್ವಂಧ್ವಗಳು ಕಂಡುಬಂದಿರುವುದರಿಂದ ಅಭಿಯೋಜನೆಯ ವಾದಕ್ಕೆ ತುಂಬಾ ಹಿನ್ನೆಡೆ ಉಂಟಾಗಿರುತ್ತದೆಂದು ಈ ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಫ್ರಾಸಾ1 ರಿಂದ 3 ರವರನ್ನು ಹೊರತುಪಡಿಸಿ ಬೇರೆ ಯಾವ ಸ್ವತಂತ್ರ ಸಾಕ್ಷಿಗಳನ್ನು ಅಭಿಯೋಜನೆಯು ತಮ್ಮ ವಾದವನ್ನು ಪುಷ್ಟೀಕರಿಸಲು ನ್ಯಾಯಾಲಯದ ಮುಂದೆ ಹಾಜರು ಮಾಡಿರುವುದಿಲ್ಲ. ಆದ್ದರಿಂದ, ಆರೋಪಿಯು ಫ್ರಾಸಾ1 ರವರ ಮೇಲ್ಲೆ ಮಾಡಿ, ಆವಾಚ್ಯ ಶಬ್ಧಗಳಿಂದ ಬೈದು, ಪ್ರಾಣ ಬೆದರಿಕೆ ಹಾಕಿ, ಆ ಮೂಲಕ ಕೌಟುಂಬಿಕ ದೌರ್ಜನ್ಯ ವರದಕ್ಷಿಣೆ ಕಿರುಕುಳವನ್ನು ಫ್ರಾಸಾ1 ರವರಿಗೆ ನೀಡಿದ್ದಾರೆಂದು ಮತ್ತು ಇನ್ನೊಂದು ಮದುವೆಯನ್ನು ಆಗಿದ್ದಾರೆಂದು ನಿಸ್ಸಂಶಯಾತೀತವಾಗಿ ಹೇಳಲು ಸಾಧ್ಯವಿಲ್ಲ.

**37.** ಮಾನ್ಯ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಹರೇಂದ್ರ ನರೈನ್ ಸಿಂಗ್ ವಿರುದ್ಧ ಬಿಹಾರ ರಾಜ್ಯ ( AIR 1991 SC 1842) ಪ್ರಕರಣದಲ್ಲಿ ವರದಿ ಮಾಡಿದ ತೀರ್ಪಿನ ಪ್ರಕಾರ, ಒಂದು ಪ್ರಕರಣದಲ್ಲಿ ಎರಡು ಅನುಮಾನಾಸ್ಪದ ದೃಷ್ಟಿಕೋನಗಳು ಅಸ್ತಿತ್ವದಲ್ಲಿದ್ದಾಗ, ನ್ಯಾಯಾಲಯವು ಆರೋಪಿಗಳ ಮುಗ್ಧತೆಯ ಪರವಾಗಿ ಇರುವಂತಹ ದೃಷ್ಟಿಕೋನವನ್ನು ಅಳವಡಿಸಿಕೊಳ್ಳಬೇಕು. ಅದರಂತೆ, ಸಾಕ್ಷ್ಯಾಧಾರಗಳಿಂದ ಬರುವ ಸಂಗತಿಗಳು ಮತ್ತು ಸಂದರ್ಭಗಳನ್ನು ಪರಿಗಣಿಸಿ, ಆರೋಪಿಸಿದಂತೆ ಆರೋಪಿಯು ನಿರಪರಾಧಿಯಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

**38.** ಆದ್ದರಿಂದ, ಅನುಮಾನದ ಪ್ರಯೋಜನವು ಆರೋಪಿಗೆ ಹೋಗುತ್ತದೆ. ಆದ್ದರಿಂದ ಎಲ್ಲಾ ಅನುಮಾನಗಳನ್ನು ಮೀರಿ ಆರೋಪಿಯ ತಪ್ಪನ್ನು ಸಾಬೀತುಪಡಿಸಲು ಮಾನ್ಯ ಅಭಿಯೋಜನೆಯು ವಿಫಲವಾಗಿದೆ. ಈಗಿರುವಾಗ ಆರೋಪಿಯು ಕೃತ್ಯ ಮಾಡಿರುತ್ತಾರೆಂದು ಪರಿಗಣಿಸಲು ಸಾಧ್ಯವಾಗುವುದಿಲ್ಲ. ಆಗಾಗಿ ಸಾಕ್ಷ್ಯಾಧಾರಗಳ ಕೊರತೆ ಇರುವ ಕಾರಣ, ಆರೋಪಿಯೇ ಮೇಲ್ಕಂಡ ಕೃತ್ಯ ಎಸಗಿರುತ್ತಾರೆಂದು ಗಣನೆಗೆ ತೆಗೆದುಕೊಳ್ಳಲು ಯಾವುದೇ ಪೂರಕವಾದ ಸಾಕ್ಷ್ಯಾಧಾರಗಳು ಪ್ರಸ್ತುತ ಪ್ರಕರಣದಲ್ಲಿ ಕಂಡು ಬಂದಿರುವುದಿಲ್ಲ.

**39.** ಆರೋಪಿಯು ಮೇಲ್ಕಂಡ ಅಪರಾಧವೆಸಗಿರುತ್ತಾರೆಂದು ರುಜುವಾತುಪಡಿಸುವಂತಹ ಯಾವುದೇ ಸ್ವತಂತ್ರ ಸಾಕ್ಷ್ಯಧಾರಗಳು ಪ್ರಸ್ತುತ ಪ್ರಕರಣದಲ್ಲಿ ಕಂಡು ಬಂದಿರುವುದಿಲ್ಲ. ಹೀಗಿರುವಾಗ ಆರೋಪಿಯು ಮೇಲ್ಕಂಡ ಅಪರಾಧವನ್ನು ಎಸಗಿರುತ್ತಾರೆಂದು ಪರಿಗಣಿಸುವುದು ನ್ಯಾಯಸಮ್ಮತವಲ್ಲವೆಂದು ಭಾವಿಸುತ್ತಾ, ಆರೋಪಿಯ ಮೇಲೆ ಹೊರಿಸಿದ, ದೋಷಾರೋಪಣೆಯನ್ನು ನಿಸ್ಸಂಶಯಾತೀತವಾಗಿ ರುಜುವಾತುಪಡಿಸಲು ಮಾನ್ಯ ಅಭಿಯೋಜನೆಯು ವಿಫಲವಾಗಿದೆ ಎಂದು ತೀರ್ಮಾನಿಸುತ್ತಾ, ನ್ಯಾಯಾಲಯವು ಅಂಶ-1 ಮತ್ತು 2 ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

**<u>ಅಂಶ-3</u>:-**

**40.** ಮೇಲಿನ ಅಂಶ-1 ಮತ್ತು 2ರಲ್ಲಿ ಚರ್ಚಿಸಿದ ಕಾರಣಗಳಿಂದ, ಈ ಕೆಳಕಂಡಂತೆ;

<u>ಆದೇಶ</u>

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1)ರಡಿ, ಆರೋಪಿಯನ್ನು ಭಾರತ ದಂಡ ಸಂಹಿತೆ ಕಲಂ.498 ಎ ಮತ್ತು ವರದಕ್ಷಿಣೆ ನಿಷೇಧಾ ಕಾಯಿದೆ ಕಲಂ 3 ಮತ್ತು 4 ರಡಿಯಲ್ಲಿ ಆರೋಪಿಸಲಾದ ಶಿಕ್ಷಾರ್ಹ ಅಪರಾಧಗಳು ಸಾಬೀತಾಗಿಲ್ಲವೆಂದು ಪರಿಗಣಿಸಿ, ಬಿಡುಗಡೆ ಮಾಡಲಾಗಿದೆ.

ಆರೋಪಿಯು ದಂಡ ಪ್ರಕ್ರಿಯಾ ಸಂಹಿತೆ ಕಲಂ.437 ಎ ರನ್ವಯ ಬರೆದುಕೊಟ್ಟ ಬಂಧಪತ್ರಗಳು ಹಾಗೂ ಅವರ ಜಾಮೀನುದಾರರ ಬಂಧಪತ್ರಗಳು ಮುಂದಿನ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತವೆ.

*(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರವಾಗಿ ಉಕ್ತಲೇಖನ ನೀಡಿ, ನಂತರ ಅದು ನನ್ನಿಂದ ಪರಿಷ್ಕರಿಸಲ್ಪಟ್ಟು, ಈ ದಿನಾಂಕ **14 ನೇ ಆಗಸ್ಟ್ 2026** ಇಸವಿಯಂದು ತೆರೆದ ನ್ಯಾಯಾಲಯದಲ್ಲಿ ಓದಲಾಯಿತು)*

YOGESH M R
Digitally signed by YOGESH M R
Date: 2026.08.14 16:04:11 +0530

**( ಯೋಗೇಶ ಎಂ.ಆರ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಮೂಡಿಗೆರೆ.

**-: ಅನುಬಂಧ :-**

ಅಭಿಯೋಜನೆಯ ಪರ ಮಾಡಿಸಲಾದ ಸಾಕ್ಷಿಗಳ ಪಟ್ಟಿ:-

| | | |
|---|---|---|
| ಪ್ರಾಸಾ.1 | - | ವಾಹಿದ |
| ಪ್ರಾಸಾ.2 | - | ಅಬ್ದುಲ್ |
| ಪ್ರಾಸಾ.3 | - | ಅನೀಫ್ |
| ಪ್ರಾಸಾ.4 | - | ರಾಮಚಂದ್ರ.ವೈ.ಪಿ |
| ಪ್ರಾಸಾ.5 | - | ಎಂ.ಜಗದೀಶ್ |

ಅಭಿಯೋಜನೆಯ ಪರವಾಗಿ ಪ್ರದರ್ಶಿಕೆ ಮಾಡಲಾದ ದಾಖಲೆಗಳು:-

| | | |
|---|---|---|
| ನಿಪಿ.1 | - | ದೂರು |
| ನಿಪಿ.1(ಎ) | - | ಪ್ರಾಸಾ.1 ರವರ ಸಹಿ |
| ನಿಪಿ.1(ಬಿ) | - | ಪ್ರಾಸಾ.4 ರವರ ಸಹಿ |
| ನಿಪಿ.2 | - | ಪ್ರಥಮ ವರ್ತಮಾನ ವರದಿ |
| ನಿಪಿ.2(ಎ) | - | ಪ್ರಾಸಾ.1 ರವರ ಸಹಿ |
| ನಿಪಿ.2(ಬಿ) | - | ಪ್ರಾಸಾ.4 ರವರ ಸಹಿ |
| ನಿಪಿ.3 | - | ಪಂಚನಾಮೆ |
| ನಿಪಿ.3(ಎ) | - | ಪ್ರಾಸಾ.1 ರವರ ಸಹಿ |

| | | |
|---|---|---|
| ನಿಪಿ.3(ಬಿ) | - | ಫ್ರಾಸಾ.3 ರವರ ಸಹಿ |
| ನಿಪಿ.3(ಸಿ) | - | ಫ್ರಾಸಾ.5 ರವರ ಸಹಿ |
| ನಿಪಿ.4, 5 | - | ಛಾಯಾಚಿತ್ರಗಳು |
| ನಿಪಿ.6 | - | ಪಂಚನಾಮೆ |
| ನಿಪಿ.6(ಎ) | - | ಫ್ರಾಸಾ.1 ರವರ ಸಹಿ |
| ನಿಪಿ.6(ಬಿ) | - | ಫ್ರಾಸಾ.3 ರವರ ಸಹಿ |
| ನಿಪಿ.6(ಸಿ) | - | ಫ್ರಾಸಾ.5 ರವರ ಸಹಿ |
| ನಿಪಿ.7, 8 | - | ಛಾಯಾಚಿತ್ರಗಳು |
| ನಿಪಿ.9 | - | ಅಮಾನತ್ ಮಹಜರ್ |
| ನಿಪಿ.9(ಎ) | - | ಫ್ರಾಸಾ.1 ರವರ ಸಹಿ |
| ನಿಪಿ.9(ಬಿ) | - | ಫ್ರಾಸಾ.3 ರವರ ಸಹಿ |
| ನಿಪಿ.9(ಸಿ) | - | ಫ್ರಾಸಾ.5 ರವರ ಸಹಿ |
| ನಿಪಿ.10-13 | - | ಛಾಯಾಚಿತ್ರಗಳು |
| ನಿಪಿ.14 | - | ಅಡಕ ಮುದ್ರಿಕೆ |
| ನಿಪಿ.15 | - | 65-ಬಿ ರಡಿಯಲ್ಲಿನ ಪ್ರಮಾಣ ಪತ್ರ |
| ನಿಪಿ.15(ಎ) | - | ಫ್ರಾಸಾ.5 ರವರ ಸಹಿ |
| ನಿಪಿ.16 | - | ದೂರು |
| ನಿಪಿ.16(ಎ) | - | ಫ್ರಾಸಾ.1 ರವರ ಸಹಿ |
| ನಿಪಿ.17 | - | ವಿವಾಹ ದಾಖಲು ರಿಜಿಸ್ಟರ್ ನ ದೃಢೀಕೃತ ನಕಲು |
| ನಿಪಿ.17(ಎ) | - | ಫ್ರಾಸಾ.1 ರವರ ಸಹಿ |
| ನಿಪಿ.18, 19 | - | ಮನವಿ ಪತ್ರಗಳು |
| ನಿಪಿ.18(ಎ) | - | ಫ್ರಾಸಾ.5 ರವರ ಸಹಿ |
| ನಿಪಿ.19(ಎ) | - | ಫ್ರಾಸಾ.5 ರವರ ಸಹಿ |
| ನಿಪಿ.20 | - | ದೃಢ ಪತ್ರಿಕೆ |
| ನಿಪಿ.20(ಎ) | - | ಫ್ರಾಸಾ.5 ರವರ ಸಹಿ |
| ನಿಪಿ.21-23 | - | ಮನವಿ ಪತ್ರಗಳು |

| | | |
|---|---|---|
| ನಿಪಿ.21(ಎ) | - | ಫ್ರಾಸಾ.5 ರವರ ಸಹಿ |
| ನಿಪಿ.22(ಎ) | - | ಫ್ರಾಸಾ.5 ರವರ ಸಹಿ |
| ನಿಪಿ.23(ಎ) | - | ಫ್ರಾಸಾ.5 ರವರ ಸಹಿ |
| ನಿಪಿ.24 | - | ಪತ್ರ |
| ನಿಪಿ.24(ಎ) | - | ಫ್ರಾಸಾ.5 ರವರ ಸಹಿ |
| ನಿಪಿ.25, 26 | - | ಸ್ವೀಕೃತಿಗಳು |
| ನಿಪಿ.25(ಎ) | - | ಫ್ರಾಸಾ.5 ರವರ ಸಹಿ |
| ನಿಪಿ.26(ಎ) | - | ಫ್ರಾಸಾ.5 ರವರ ಸಹಿ |
| ನಿಪಿ.27 | - | ಪತ್ರ |
| ನಿಪಿ.27(ಎ) | - | ಫ್ರಾಸಾ.5 ರವರ ಸಹಿ |
| ನಿಪಿ.28 | - | ಬೇಡಿಕೆ ರಿಜಿಸ್ಟರ್ ನ ದೃಢೀಕೃತ ನಕಲು |
| ನಿಪಿ.28(ಎ) | - | ಫ್ರಾಸಾ.5 ರವರ ಸಹಿ |
| ನಿಪಿ.29 | - | ಪತ್ರ |
| ನಿಪಿ.30 | - | ವರದಿ |
| ನಿಪಿ.30(ಎ) | - | ಫ್ರಾಸಾ.5 ರವರ ಸಹಿ |

ಅಭಿಯೋಜನೆಯ ಪರ ಗುರುತಿಸಲಾದ ಮುದ್ದೆ ಮಾಲುಗಳ ಪಟ್ಟಿ : ಇಲ್ಲ

ಆರೋಪಿ ಪರ ವಿಚಾರಣೆಯಾದ ಸಾಕ್ಷಿದಾರರು : ಇಲ್ಲ

ಆರೋಪಿ ಪರವಾಗಿ ಪ್ರದರ್ಶಿಕೆ ಮಾಡಲಾದ ದಾಖಲೆಗಳು :

ನಿಡಿ.1 - ನೋಟೀಸು

YOGESH M R
Digitally signed by YOGESH M R
Date: 2026.08.14 16:04:03 +0530

( ಯೋಗೇಶ ಎಂ.ಆರ್ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,
ಮೂಡಿಗೆರೆ.

VP
Visit ecourts.gov.in for updates or download mobile app “eCourts Services” from Android or iOS